# ಬೋಧಕರ ವಿವರ


೧. **ಹೆಸರು** : **ರಹಮತ್ ತರೀಕೆರೆ**

೨. **ಜನ್ಮ ದಿನಾಂಕ** : ೨೬.೦೮.೧೯೫೯

೩. **ವಿದ್ಯಾರ್ಹತೆ** : ಎಂ.ಎ., ಪಿಎಚ್.ಡಿ

೪. **ವಿಳಾಸ** : 'ಸೂಫಿ' ಎಂಪಿ ಪ್ರಕಾಶನಗರ, ಹೊಸಪೇಟೆ, ೫೮೩೨೭೬

೫. **ಸ್ಥಿರ ದೂರವಾಣಿ ಸಂಖ್ಯೆ** : ೦೮೩೯೪-೨೨೬೨೨೩

೬. **ಮೊಬೈಲ್ ಸಂಖ್ಯೆ** : ೯೪೪೮೦೨೪೯೧೦೧

೭. **ಫ್ಯಾಕ್ಸ್ ಸಂಖ್ಯೆ** : ೦೮೩೯೪ ೨೪೧೩೩೫

೮. **ಇ-ಮೇಲ್ ವಿಳಾಸ** : tarikere86@rediffmail.com


೯. **ಕಾರ್ಯನಿರ್ವಹಿಸುತ್ತಿರುವ ವಿಭಾಗ** : ಕನ್ನಡ ಸಾಹಿತ್ಯ ಅಧ್ಯಯನ

೧೦. **ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ** : ಪ್ರಾಧ್ಯಾಪಕ

೧೧. **ವಿಷಯ ತಜ್ಞತೆ**
೧. ಸೂಫಿಪಂಥ ೪. ನಾಥಪಂಥ
೨. ಸಾಹಿತ್ಯ ವಿಮರ್ಶೆ ೫. ಮೊಹರಂ
೩. ಕರ್ನಾಟಕದ ಅವಧೂತರು ೬. ಶಾಕ್ತಪಂಥ

೧೨. **ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು**
೧. ಅನುಭಾವಿ ಪಂಥಗಳು ೪. ಬಹುಭಾಷಿಕ ಸಂಸ್ಕೃತಿ
೨. ಜಾನಪದ ೫. ಸಾಹಿತ್ಯ ವಿಮರ್ಶೆ
೩. ಸಾಂಸ್ಕೃತಿಕ ಅಧ್ಯಯನ ೬. ಸಾಹಿತ್ಯ ಮೀಮಾಂಸೆ

೧೩. **ಯೋಜನೆಗಳ ವಿವರ**

**೧೩.೧. ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು**

**೧. ಕರ್ನಾಟಕ ಕೋಶ**

ಇದೊಂದು ಮಾಹಿತಿ ಪ್ರಧಾನವಾದ ಕೋಶ. ಆದರೆ ಇಲ್ಲಿ ಮಾಹಿತಿ ಶುಷ್ಕವಾಗಿಲ್ಲ. ಬದಲಿಗೆ ಸಾಂಸ್ಕೃತಿಕ ಹಿನ್ನೆಲೆಯಲ್ಲಿದೆ. ಸಾಂಸ್ಕೃತಿಕವೆಂದರೆ, ನಾಡಿನ ಜನಸಮುದಾಯಗಳ ನಿತ್ಯ ಬದುಕಿನ ಜತೆ ಸಂಬಂಧ ಪಡೆದಿರುವುದು. ನಾಡಿನ ಪ್ರತಿಷ್ಠಿತ ವರ್ಗಗಳು ಅಮುಖ್ಯವೆಂದು ಭಾವಿಸಿರುವ ಮತ್ತು ಕರ್ನಾಟಕ ಸಂಸ್ಕೃತಿಯ ಚರ್ಚೆಗಳಲ್ಲಿ ಮುಂಚೂಣಿಗೆ ಬಾರದ ಸಂಗತಿಗಳನ್ನು ಇಲ್ಲಿ ಪ್ರಮುಖವಾಗಿ ಚರ್ಚಿಸಿದೆ. ಉದಾ.ಗೆ, ಜನಪದ ಧರ್ಮಗಳು, ಜನಪದ ದೈವಗಳು, ಜನಪದ ಸಾಂಸ್ಕೃತಿಕ ವೀರರು, ಸಮುದಾಯಗಳು ದೊಡ್ಡ ಪ್ರಮಾಣದಲ್ಲಿ ಭಾಗವಹಿಸುವ ಪರಿಸೆಗಳು, ಜನರ ಜತೆ ಸಂಬಂಧ ಹೊಂದಿರುವ ನದಿಗಳು-ಇತ್ಯಾದಿ.

**೨. ಧರ್ಮ ವಿಶ್ವಕೋಶ**

ಕರ್ನಾಟಕದ ಧರ್ಮಗಳ ಮೇಲೆ ಬಂದಿರುವ ಅಧ್ಯಯನಗಳ ಸಾಮಾನ್ಯ ಸಮಸ್ಯೆಯೆಂದರೆ, ಪ್ರತಿಷ್ಠಿತ ಧರ್ಮಗಳನ್ನು ಪರಿಗಣಿಸಿ ಚರ್ಚಿಸಿರುವುದು. ಅಲ್ಲಿ ಜನಸಮುದಾಯಗಳು ತಮ್ಮ ಬದುಕಿನ ಭಾಗವಾಗಿಸಿಕೊಂಡಿರುವ ಧರ್ಮಗಳ ಪಂಥಗಳ ಆಚರಣೆಗಳ ಚರ್ಚೆ ಅಷ್ಟಾಗಿಲ್ಲ. ಈ ಹಿನ್ನೆಲೆಯಲ್ಲಿ ಧರ್ಮ ಎಂಬುದನ್ನು ವಿಶಾಲ ನೆಲೆಯಲ್ಲಿ ಅರ್ಥೈಸಿಕೊಂಡು, ಅದರೊಳಗಿನ ಬೇರೆಬೇರೆ ಆಶಯಗಳನ್ನು ಗುರುತಿಸಿ,



PDF created with pdfFactory trial version www.pdffactory.com

ಅವುಗಳ ಮೇಲೆ ಲೇಖನಗಳನ್ನು ಈ ಕೋಶದಲ್ಲಿ ಬರೆಸಿ ಪ್ರಕಟಿಸಲಾಗಿದೆ. ಲೇಖನಗಳನ್ನು ನಾಡಿನ ಹೆಸರಾಂತ ವಿದ್ವಾಂಸರು ಬರೆದಿದ್ದಾರೆ. ಧರ್ಮವನ್ನು ಕುರಿತು ನಮ್ಮ ಸಾಂಪ್ರದಾಯಕ ಚರ್ಚೆಗಳಲ್ಲಿ ಇರುವ ಪರಿಕಲ್ಪನೆಯನ್ನು ಬದಲಿಸುವ ಆಶಯವನ್ನು ಕೋಶವು ಒಳಗೊಂಡಿದೆ.

**೧೩.೨. ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು**

**೧. ಕನ್ನಡ ಸಾಹಿತ್ಯ ಮತ್ತು ಪ್ರತಿಸಂಸ್ಕೃತಿ**

ಆಧುನಿಕ ಕನ್ನಡ ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ವಿಶ್ಲೇಷಿಸುವ ಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ವಿಶ್ಲೇಷಣೆಯನ್ನು ಪ್ರತಿಸಂಸ್ಕೃತಿ ಎಂಬ ಪರಿಕಲ್ಪನೆಯನ್ನು ಇಟ್ಟುಕೊಂಡು ಮಾಡಲಾಗಿದೆ. ಪ್ರತಿಸಂಸ್ಕೃತಿ ಎಂದರೆ, ಎಲ್ಲ ಬಗೆಯ ಅಧಿಕಾರಸ್ಥ ರಚನೆಗಳ ವಿರುದ್ಧ ದಂಗೆಯೇಳುವ ಮತ್ತು ತನ್ನದೇ ಆದ ಪರ್ಯಾಯವನ್ನು ಕಟ್ಟಿಕೊಳ್ಳುವ ದಮನಿತ ಸಮುದಾಯಗಳ ಸ್ವಾಭಿಮಾನ ಮತ್ತು ಚೈತನ್ಯ ಪ್ರಕಟಣೆ ಎಂದು ಸರಳವಾಗಿ ನಿರ್ವಚಿಸಿಕೊಳ್ಳಲಾಗಿದೆ. ಆರಂಭ, ಪ್ರಮಾಣ, ತೊಡಕು, ನಿರ್ಮಾಣ ಎಂಬ ನಾಲ್ಕು ಭಾಗಗಳಲ್ಲಿ ಈ ವಿಶ್ಲೇಷಣೆಯಿದೆ.

**೨. ಕರ್ನಾಟಕದ ಸೂಫಿಗಳು**

ಸೂಫಿಗಳ ಪ್ರಸ್ತಾಪವಿಲ್ಲದೆ ಕರ್ನಾಟಕದ ಸಂಸ್ಕೃತಿಯ ಚಿತ್ರ ಪೂರ್ಣಗೊಳ್ಳುವುದಿಲ್ಲ. ಕರ್ನಾಟಕದ ಜನಸಮುದಾಯಗಳ ಬದುಕಿನಲ್ಲಿ ಸೂಫಿಸಂಸ್ಕೃತಿಯು ಹಾಗೆ ಬೆರೆತುಹೋಗಿದೆ. ವ್ಯಕ್ತಿಗಳು ಸಾಧನೆಯಿಂದ ಸ್ವಯಂ ಬಿಡುಗಡೆ ಪಡೆಯಬೇಕು ಮತ್ತು ತಾವೇ ದೈವತ್ವವನ್ನು ಪಡೆಯಬೇಕು ಎಂಬ ಆಶಯವುಳ್ಳ ಸೂಫಿಪಂಥವು ಸಾಂಪ್ರದಾಯಕ ಧರ್ಮ ಹಾಗೂ ರಾಜಪ್ರಭುತ್ವಗಳನ್ನು ಎದುರುಹಾಕಿಕೊಂಡಿತು. ಆದರೆ ಪ್ರೇಮತತ್ವದ ಮೇಲೆ ನಿಂತಿರುವ ಈ ಪಂಥವು, ಕರ್ನಾಟಕದ ಗುರುಪಂಥಗಳ ಜತೆ ಸ್ನೇಹವನ್ನು ಗಳಿಸಿತು. ಜನತೆಯ ಧರ್ಮವಾಗಿ ಕೆಲಸ ಮಾಡಿತು. ಕರ್ನಾಟಕದ ಧರ್ಮ, ಭಾಷೆ, ಸಂಸ್ಕೃತಿಗಳಲ್ಲಿ ಅಡಗಿರುವ ಸೂಫಿಪಂಥದ ಚಿತ್ರವನ್ನು ಈ ಕೃತಿ ಕಟ್ಟಿಕೊಡುತ್ತದೆ.

**೩. ಕರ್ನಾಟಕದ ನಾಥಪಂಥ**

ಕರ್ನಾಟಕವು ಸೂಫಿ, ನಾಥ, ಶಾಕ್ತ, ಕಾಪಾಲಿಕ, ಕಾಳಾಮುಖ, ಮುಂತಾದ ಅನೇಕ ಪಂಥಗಳಿದ್ದ ನಾಡು. ಆದರೆ ಕ್ಲಾಸಿಕಲ್ ಧರ್ಮಗಳ ಮೇಲೆ ನಡೆದಿರುವಷ್ಟು ಅಧ್ಯಯನ ಈ ಪಂಥಗಳ ಮೇಲೆ ಅಧ್ಯಯನಗಳು ನಡೆದಿಲ್ಲ. ಗೋರಖನಾಥ ಮಚೇಂದ್ರನಾಥರನ್ನು ತನ್ನ ಸಾಂಸ್ಕೃತಿಕ ದಾರ್ಶನಿಕ ನಾಯಕರನ್ನಾಗಿ ಮಾಡಿಕೊಂಡಿರುವ ನಾಥಪಂಥವು, ಮೂಲತಃ ಉತ್ತರಭಾರತೀಯ. ಆದರೆ ಅದಕ್ಕೆ ಕರ್ನಾಟಕದಲ್ಲಿ ವ್ಯಾಪಕವಾದ ನೆಲೆಯಿದೆ. ಕರ್ನಾಟಕದ ಹಣಿಗಿಯವರು, ಕಾಪಾಲಿಕರು ಜೋಗಿಗಳು ಮುಂತಾದ ಸಮುದಾಯಗಳಲ್ಲಿ ಅದು ಬೇರುತಳೆದಿದೆ. ಈ ಪಂಥದ ದರ್ಶನ, ಸಮುದಾಯ ಸಂಬಂಧ, ಆಚರಣಾ ಲೋಕ ಹಾಗೂ ಸಾಹಿತ್ಯ ಕುರಿತು ಇದರಲ್ಲಿ ವಿಶ್ಲೇಷಣೆಗಳಿವೆ.

**೪. ಇಲ್ಲಿ ಯಾರೂ ಮುಖ್ಯರಲ್ಲ (ಕನ್ನಡ ಸಾಹಿತ್ಯ ಮೀಮಾಂಸೆ ೨)**

ಕನ್ನಡಕ್ಕೆ ೧೧ ಶತಮಾನಗಳ ಸಾಹಿತ್ಯ ಪರಂಪರೆಯಿದ್ದು, ಅದಕ್ಕೆ ಅದರದ್ದೇ ಆದ ಸಾಹಿತ್ಯ ಮೀಮಾಂಸೆಯೂ ಇದೆ. ಅದು ಪ್ರಾಚೀನಕಾವ್ಯಗಳ ಪೂರ್ವಪೀಠಿಕೆಗಳಲ್ಲಿಯೂ, ಆಧುನಿಕ ಕನ್ನಡದ ಕಾವ್ಯದಲ್ಲಿಯೂ, ಚಿಂತನಾ ಬರೆಹದಲ್ಲಿಯೂ, ಜನಪದ ಸಾಹಿತ್ಯದಲ್ಲಿಯೂ–ಹೀಗೆ ಬಗೆಬಗೆಯಾಗಿ ವ್ಯಕ್ತವಾಗಿದೆ. ಆದರೂ ಸಂಸ್ಕೃತ ಕಾವ್ಯಮೀಮಾಂಸೆಯ ಪಡಿನೆಳಲೇ ಕನ್ನಡದಲ್ಲಿ ಸಾಹಿತ್ಯ ತತ್ವವಾಗಿ ಕೆಲಸ ಮಾಡಿದೆ ಎಂಬ ಗ್ರಹಿಕೆ ವ್ಯಾಪಕವಾಗಿದೆ. ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯ ಕೃತಿಗಳ ಒಳಗೇ ಇರುವ ಸಾಹಿತ್ಯ ತತ್ವವನ್ನು ಶೋಧಿಸುವ ಕೆಲಸವನ್ನು ಈ ಕೃತಿ ಮಾಡುತ್ತದೆ.

**೧೪. ಪ್ರಗತಿಯಲ್ಲಿರುವ ಯೋಜನೆಗಳು**

**೧. ಬಹುಭಾಷಿಕ ಸಾಹಿತ್ಯ ಸಂಪುಟ**

ಕನ್ನಡ ಸಾಹಿತ್ಯದಲ್ಲಿ ಬಹುಭಾಷಿಕ ಕವಿಗಳಿದ್ದಾರೆ. ವಿಶೇಷವೇನೆಂದರೆ, ಕನ್ನಡ ಸಾಹಿತ್ಯ ರಚನೆಯಲ್ಲಿಯೇ ವಿಭಿನ್ನ ಭಾಷೆಯ ರಚನೆಗಳು ಬೆರೆಯುವ ಒಂದು ಪರಿಯಿದೆ. ಅಂದರೆ ಕನ್ನಡದಲ್ಲಿ ತೆಲುಗು, ಉರ್ದು, ಮರಾಠಿ, ತಮಿಳು, ತುಳು, ಕೊಂಕಣಿ, ಇಂಗ್ಲಿಷು ಸಂಕರಗೊಳ್ಳುತ್ತದೆ. ಒಂದೇ ರಚನೆಯಲ್ಲಿ ಐದಾರು ಭಾಷೆಗಳು ಬೆರೆಯುವ ನಿದರ್ಶನಗಳೂ ಇವೆ. ಇಂಥ ರಚನೆಗಳನ್ನು ಸಂಕಲಿಸಿ, ಈ ಸಂಕರಕ್ಕೆ ಸಾಂಸ್ಕೃತಿಕ ಕಾರಣಗಳನ್ನು ಶೋಧಿಸುವ ಕೆಲಸವನ್ನು ಈ ಸಂಪುಟ



PDF created with pdfFactory trial version www.pdffactory.com

ಮಾಡುತ್ತದೆ. ಇದರಲ್ಲಿ ಬಹುಭಾಷಿಕ ಶಾಸನಗಳು, ದಾಖಲೆಗಳು, ತತ್ವಪದಗಳು, ನಾಟಕಗಳು ಹಾಗೂ ಜನಪದ ರಚನೆಗಳು ಸೇರಿವೆ.

**೨. ಕರ್ನಾಟಕ ಶಾಕ್ತಪಂಥ**
ಕರ್ನಾಟಕದ ಪ್ರಭಾವಶಾಲಿ ಪಂಥಗಳಲ್ಲಿ ಶಾಕ್ತವೂ ಒಂದು. ಶಕ್ತಿ ಇಲ್ಲವೇ ಸ್ತ್ರೀಪ್ರಧಾನವಾದ ಈ ಪಂಥವು ಕರ್ನಾಟಕದ ತುಂಬ ಸ್ತ್ರೀದೇವತೆಗಳ ಆರಾಧನೆಗೆ ಕಾರಣವಾಗಿದೆ. ಅನೇಕ ಪಠ್ಯಗಳು, ಶಿಲ್ಪಗಳು, ಆಚರಣೆಗಳು ಇದರ ಸುತ್ತ ಸೃಷ್ಟಿಯಾಗಿವೆ. ಕರ್ನಾಟಕದಲ್ಲಿ ಪ್ರಮುಖ ಶಾಕ್ತಕೇಂದ್ರಗಳಿವೆ. ಶಾಕ್ತಸಿದ್ಧರಿದ್ದಾರೆ. ಶಾಕ್ತರು ಶೈವ ವಿರಕ್ತಪಚಿಥದ ಜತೆ  ಮಾಡಿದ ಸಂಘರ್ಷಗಳಿವೆ. ಈ ಪಂಥವು ಜನಪದ ನೆಲೆಯುಲ್ಲಿ ಹರದೇಶಿ ನಾಗೇಶಿ ಸಂಪ್ರದಾಯಕ್ಕೆ ಕಾರಣವಾಗಿದೆ. ಇವೆಲ್ಲವನ್ನೂ ಇಟ್ಟುಕೊಂಡು ಒಂದು ಸಾಂಸ್ಕೃತಿಕ ವಿಶ್ಲೇಷಣೆ ಮಾಡುವ ಉದ್ದೇಶವಿದೆ.

**೧೫. ಪ್ರಕಟಣೆಗಳು**

**೧೫.೧. ವಿಶ್ವವಿದ್ಯಾಲಯದಿಂದ ಪ್ರಕಟಿತ ಕೃತಿಗಳು**

**೧. ಮರದೊಳಗಣ ಕಿಚ್ಚು (ಸಂಸ್ಕೃತಿ ಚಿಂತನೆ) ೨೦೦೦**
ಆಧುನಿಕ ಕನ್ನಡ ಸಾಹಿತ್ಯವನ್ನು ಹಾಗೂ ಜನಪದ ಸಾಹಿತ್ಯವನ್ನು ಪ್ರಧಾನವಾದ ಆಕರವಾಗಿ ಇಟ್ಟುಕೊಂಡು, ಅದನ್ನು ಪ್ರತಿಸಂಸ್ಕೃತಿಯೆಂಬ ಪರಿಕಲ್ಪನೆಯ ಮೂಲಕ ವಿಶ್ಲೇಷಣೆ ಮಾಡುವುದು ಈ ಕೃತಿಯ ಉದ್ದೇಶ. ಕನ್ನಡದ ಪಠ್ಯಗಳು ನಮ್ಮ ಸಮಾಜದಲ್ಲಿ ಇರುವ ತಾರತಮ್ಯದ ಲೋಕದೃಷ್ಟಿಯನ್ನು ಕೃತಿಗಳು ಒಳಗೊಂಡಿರುವಂತೆಯೇ, ತಾರತಮ್ಯವನ್ನು ಪ್ರತಿರೋಧಿಸುವ ಬಂಡುಕೋರತನದ ನಿಲುವುಗಳನ್ನೂ ಪರ್ಯಾಯ ಸಮಾಜದ ಕನಸುಗಳನ್ನೂ ಒಳಗೊಂಡಿವೆ. ಇದೆಲ್ಲದರ ಕುರಿತು ಚಿಂತನೆಯನ್ನು ಈ ಕೃತಿ ಮಾಡುತ್ತದೆ.

**೨. ಕರ್ನಾಟಕದ ಸೂಫಿಗಳು (ಸಂಶೋಧನೆ) ೧೯೯೮**
ಕರ್ನಾಟಕದಲ್ಲಿ ಅದರಲ್ಲಿಯೂ ಉತ್ತರ ಕರ್ನಾಟಕದಲ್ಲಿ ದೊಡ್ಡ ಸಂಖ್ಯೆಯ ನೂರಾರು ಸೂಫಿಸಂತರ ಸ್ಮಾರಕಗಳಿವೆ. ಅವುಗಳ ಸುತ್ತ ಒಂದು ಆಚರಣೆಯ ಲೋಕ ಬೆಳೆದಿದೆ. ಸೂಫಿಗಳಿಗೆ ಸಂಬಂಧಿಸಿದಂತೆ ಉರ್ದು ಫಾರಸಿ ಕನ್ನಡಗಳಲ್ಲಿ ಸಾಹಿತ್ಯವಿದೆ. ಕರ್ನಾಟಕದ ಭಾಷೆ ಸಂಗೀತ ಧರ್ಮ ಚರಿತ್ರೆ ದರ್ಶನಗಳಿಗೆ ಸೂಫಿಪಂಥದ ಸಂಬಂಧವಿದೆ. ಇದೆಲ್ಲವನ್ನು ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ವಿಶ್ಲೇಷಿಸುವ ಕೆಲಸವನ್ನು ಈ ಕೃತಿ ಮಾಡುತ್ತದೆ. ಸೂಫಿಗಳ ಚರಿತ್ರೆ ಮತ್ತು ವರ್ತಮಾನವನ್ನು ಏಕಕಾಲದಲ್ಲಿ ಹಿಡಿದುನೋಡುವ ಯತ್ನವನ್ನು ಸಹ ಇದು ಮಾಡುತ್ತದೆ.

**೩. ಇಲ್ಲಿ ಯಾರೂ ಮುಖ್ಯರಲ್ಲ, (ಕನ್ನಡ ಸಾಹಿತ್ಯ ಮೀಮಾಂಸೆ-೨) ೨೦೦೫**
ಕರ್ನಾಟಕದ ಶೈಕ್ಷಣಿಕ ವಲಯದಲ್ಲಿ ನಡೆಯುತ್ತಿರುವ ಕನ್ನಡ ಸಾಹಿತ್ಯ ಅಧ್ಯಯನಗಳಲ್ಲಿ ಕನ್ನಡ ಸಾಹಿತ್ಯ ಚಿಂತನೆಗಳನ್ನು ಕಲಿಸುವುದಿಲ್ಲ. ಬದಲಿಗೆ  ಭಾರತೀಯ ಎಂಬ ಹೆಸರಲ್ಲಿರುವ ಸಂಸ್ಕೃತ ಕಾವ್ಯಮೀಮಾಂಸೆಯನ್ನು ಕಲಿಸಲಾಗುತ್ತದೆ. ಆದರೆ ಸಮೃದ್ಧವಾಗಿರುವ ಕನ್ನಡ ಸಾಹಿತ್ಯದಲ್ಲಿ ಅದರದ್ದೇ ಆದ ಸಾಹಿತ್ಯ ತತ್ವಗಳು ಇವೆ. ಅವನ್ನು ಶೋಧಿಸಿ ಮುಂಚೂಣಿಗೆ ತರುವ ಕಾರ್ಯವನ್ನು ಅನೇಕರು ಮಾಡಿಕೊಂಡು ಬಂದಿದ್ದಾರೆ. ಅದರ ಮುಂದುವರಿಕೆಯಾಗಿ ಆಧುನಿಕ ಕನ್ನಡ ಸಾಹಿತ್ಯವನ್ನು ಆಕರವಾಗಿ ಇಟ್ಟುಕೊಂಡು ಅದರ ಮೂಲಕ ಕನ್ನಡ ಸಾಹಿತ್ಯ ಚಿಂತನೆಯನ್ನು ಶೋಧಿಸುವ ಕಾರ್ಯವನ್ನು ಈ ಕೃತಿ ಮಾಡುತ್ತದೆ.

**೪. ಕರ್ನಾಟಕದ ನಾಥಪಂಥ ೨೦೦೬**
ಕರ್ನಾಟಕದ ಜನಸಮುದಾಯಗಳ ಬದುಕಿನಲ್ಲಿ ಅನೇಕ ದರ್ಶನಗಳು ಬೇರೆಬೇರೆ ರೂಪಗಳಲ್ಲಿ ಅಡಗಿವೆ. ಅವುಗಳಲ್ಲಿ ನಾಥದರ್ಶನವೂ ಒಂದು. ಬಹಳ ಪ್ರಾಚೀನ ಶೈವದರ್ಶನಗಳಲ್ಲಿ ಒಂದಾದ ನಾಥವು, ಕರ್ನಾಟಕದಲ್ಲಿ ವ್ಯಾಪಕವಾಗಿ ಇತ್ತು ಮತ್ತು ಈಗಲೂ ಇದೆ. ಅದು ಸಾಹಿತ್ಯದಲ್ಲಿ, ಮಠಗಳಲ್ಲಿ, ಆಚರಣೆಗಳಲ್ಲಿ, ಜಾನಪದದಲ್ಲಿ, ಸಮುದಾಯಗಳ ರೂಪದಲ್ಲಿ ಇದೆ. ಅದನ್ನು ವಿಸ್ತಾರವಾದ ಕ್ಷೇತ್ರಕಾರ್ಯದ ಮೂಲಕ ಈ ಕೃತಿ ಹುಡುಕಾಟ ನಡೆಸಿ ವಿಶ್ಲೇಷಣೆ ಮಾಡಲು ಯತ್ನಿಸಿದೆ.

**೫. ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ೨೦೦೭**
ಕನ್ನಡ ಸಂಶೋಧನೆಯಲ್ಲಿ ಒಂದು ಶತಮಾನ ಕಾಲದಿಂದಲೂ ಹಲವಾರು ವಿಧಾನಗಳನ್ನು ಬಳಕೆ ಮಾಡುತ್ತ ಬರಲಾಗಿದೆ. ಪ್ರತಿ ವಿಧಾನವೂ ಆಯಾ ಕಾಲದ ಚಾರಿತ್ರಿಕ ಒತ್ತಾಸೆಗಳ ಫಲವಾಗಿದೆ. ೨೧ನೇ ಶತಮಾನದಲ್ಲಿ, ಬದಲಾಗಿರುವ ಸಾಹಿತ್ಯ ಸಂಸ್ಕೃತಿ ಹಿನ್ನೆಲೆಯಲ್ಲಿ ಸಂಶೋಧನೆ ಮಾಡುವವರ ಮುಂದೆ ಹೊಸ ಸವಾಲುಗಳು



PDF created with pdfFactory trial version www.pdffactory.com

ಎದ್ದುನಿಂತಿವೆ. ಹೊಸ ಸಾಧ್ಯತೆಗಳೂ ತೆರೆದುಕೊಂಡಿವೆ. ಅಂತಹ ಕೆಲವು ಪ್ರಶ್ನೆ ಮತ್ತು ಸಾಧ್ಯತೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಬರೆಯಲಾದ ೨೦ ಲೇಖನಗಳು ಈ ಕೃತಿಯಲ್ಲಿವೆ.

### ೧೫.೨.ವೈಯಕ್ತಿಕ ಪ್ರಕಟಿತ ಕೃತಿಗಳು

**೧. ಪ್ರತಿಸಂಸ್ಕೃತಿ, (ಸಾಹಿತ್ಯವಿಮರ್ಶೆ), ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೯೩**
ಕನ್ನಡ ಸಾಹಿತ್ಯದ ಬೇರೆಬೇರೆ ಕೃತಿಗಳ ಮೇಲೆ ಮತ್ತು ಕರ್ನಾಟಕದ ಹಲವಾರು ವಿದ್ಯಮಾನಗಳ ಮೇಲೆ ಮಾಡಿರುವ ವಿಶ್ಲೇಷಣೆಯ ಬರೆಹಗಳು ಇದರಲ್ಲಿವೆ. ಕುವೆಂಪು, ದಾಸರು, ಶಾಂತರಸ, ಜಂಬಣ್ಣ ಅಮರಚಿಂತ ಅವರ ಸಾಹಿತ್ಯ ಕುರಿತಂತೆ, ಗ್ರಾಮದೇವತೆಗಳನ್ನು ಕುರಿತಂತೆ ಲೇಖನಗಳಿವೆ. ಬಂಡಾಯ ಕಾವ್ಯ, ಕತೆಗಳನ್ನು ಕುರಿತ ಲೇಖನಗಳಿವೆ.

**೨. ವಸಾಹತು ಪ್ರಜ್ಞೆ ಮತ್ತು ವಿಮೋಚನೆ, (ಅನುವಾದ), ಬೆಳ್ಳಿಚುಕ್ಕಿ ಪ್ರಕಾಶನ, ಬೆಂಗಳೂರು, ೧೯೯೬**
ಕೀನ್ಯಾ ದೇಶದ ಪ್ರಮುಖ ಲೇಖಕನೂ, ಬ್ಲಾಕ್ ಮೂವ್‌ಮೆಂಟಿನ ಚಿಂತಕನೂ ಆದ ಗೂಗಿ ವಾ ಥಿಯಾಂಗೊನ 'ಡಿ ಕಲೊನೈಜೇಶನ್ ಆಫ್ ಮೈಂಡ್' ಕೃತಿಯ ಅನುವಾದವಿದು. ಇದೊಂದು ಪ್ರಮುಖ ವಸಾಹತೋತ್ತರ ಚಿಂತನೆಯ ಕೃತಿ. ಬ್ರಿಟಿಶರಿಂದ ಆಳಿಸಿಕೊಂಡ ಎಲ್ಲ ದೇಶಗಳಲ್ಲಿ ಅನೇಕ ಬಗೆಯಲ್ಲಿ ಆ ದೇಶಗಳ ಸಂಸ್ಕೃತಿ, ಭಾಷೆ ಹಾಗೂ ಬದುಕಿನ ಕ್ರಮಗಳು ವಿರೂಪಗೊಳ್ಳುತ್ತವೆ. ಆ ವಿರೂಪಗಳೇ ವಾಸ್ತವವೆಂದು, ಆಳುವವರು ಕೊಟ್ಟ ದೃಷ್ಟಿಕೋನದಲ್ಲಿ ನಮ್ಮ ಸಂಸ್ಕೃತಿಗಳನ್ನು ನಾವು ನೋಡುತ್ತಿರುತ್ತೇವೆ. ಅದರಿಂದ ತಪ್ಪಿಸಿಕೊಂಡು ನಮ್ಮತನವನ್ನು ಪಡೆದುಕೊಳ್ಳುವ ಬಗೆಗಿನ ಹೊಳಹುಗಳು ಇದರಲ್ಲಿವೆ. ಕನ್ನಡ ಚಿಂತನೆಗೆ ಉಪಯುಕ್ತವಾಗಬಹುದೆಂಬ ಆಶಯದಲ್ಲಿ ಇದನ್ನು ಕನ್ನಡೀಕರಿಸಿದೆ.

**೩. ಅಂಡಮಾನ್ ಕನಸು, (ಪ್ರವಾಸಕಥನ), ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು, ೨೦೦೧**
ಭಾರತಕ್ಕೆ ಸೇರಿದ್ದರೂ ದೂರದ ಬಂಗಾಳ ಕೊಲ್ಲಿಯಲ್ಲಿ ಇರುವ ಅಂಡಮಾನ್ ದ್ವೀಪಗಳು, ಭಾರತದ ಪ್ರಧಾನಧಾರೆಯ ಬದುಕಿನ ಕ್ರಮಕ್ಕಿಂತ ಭಿನ್ನವಾದ ಕ್ರಮವನ್ನು ಹೊಂದಿವೆ. ಅಲ್ಲಿ ಭಾರತದ ಎಲ್ಲ ಭಾಷೆಯನ್ನಾಡುವ ಎಲ್ಲ ಪ್ರಾಂತ್ಯಗಳಿಂದ ಹೋಗಿರುವ ಜನರಿದ್ದಾರೆ. ಇದರ ಜತೆಗೆ ನಾಗರಿಕ ಸಮಾಜದ ಜತೆಗೆ ಸಂಪರ್ಕವನ್ನೇ ನಿರಾಕರಿಸಿ ಆದಿಮ ಅವಸ್ಥೆಯಲ್ಲಿ ಬದುಕುತ್ತಿರುವ ಬುಡಕಟ್ಟುಗಳೂ ಇವೆ. ಇಂತಹ ದ್ವೀಪಗಳಲ್ಲಿ ತಿಂಗಳ ಕಾಲ ತಿರುಗಾಡಿ ಬಂದ ಅನುಭವವನ್ನು ಈ ಕೃತಿ ಒಳಗೊಂಡಿದೆ.

**೪. ಸಾಂಸ್ಕೃತಿಕ ಅಧ್ಯಯನ, (ವಿಶ್ಲೇಷಣೆ) ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೪**
ಸಾಹಿತ್ಯದ ಅಧ್ಯಯನಗಳಲ್ಲಿ ಅನೇಕ ಪರಿಭಾಷೆಗಳು ಬಳಕೆಯಾಗುತ್ತವೆ. ಅವುಗಳಲ್ಲಿ ಸಾಂಸ್ಕೃತಿಕ ಅಧ್ಯಯನ ಎಂಬುದೂ ಒಂದು. ಈ ಪರಿಕಲ್ಪನೆಯನ್ನು ಕುರಿತು, ಕನ್ನಡದ ಶತಮಾನದ ಸಂಶೋಧನೆಯ ನೆಲೆಯಲ್ಲಿ ಕೆಲವು ಚರ್ಚೆಗಳನ್ನು ಬೆಳೆಸಲಾಗಿದೆ. ವಿದ್ಯಾರ್ಥಿಗಳನ್ನು ಹಾಗೂ ತರುಣ ಸಂಶೋಧಕರನ್ನು ಮನಸ್ಸಿನಲ್ಲಿ ಇಟ್ಟುಕೊಂಡು ರಚಿಸಲಾಗಿರುವ ಕೃತಿಯಿದು.

**೫. ಲೋಕವಿರೋಧಿಗಳ ಜತೆಯಲ್ಲಿ (೧೫ಸಂದರ್ಶನಗಳು), ಕ್ರೈಸ್ಟ್ ಕಾಲೇಜು, ಬೆಂಗಳೂರು, ೨೦೦೬**
ಕನ್ನಡದ ಪ್ರಮುಖ ಚಿಂತಕರೂ ಲೇಖಕರೂ ಸಾರ್ವಜನಿಕ ವ್ಯಕ್ತಿಗಳೂ ಆದ ೧೫ ಜನರ ಸಂದರ್ಶನಗಳು ಈ ಕೃತಿಯಲ್ಲಿವೆ. ಅವರೆಂದರೆ, ಎಂ. ನಂಜುಂಡಸ್ವಾಮಿ, ನೀಲಗಂಗಯ್ಯ ಪೂಜಾರ, ಸಾರಾ ಅಬೂಬಕ್ಕರ್, ದೇವನೂರ ಮಹಾದೇವ, ಶಂಕರಮೊಕಾಶಿ ಪುಣೇಕರ, ಎಸ್. ಶೆಟ್ಟರ್, ಕಡಿದಾಳು ಶಾಮಣ್ಣ, ಕೆ.ರಾಘವೇಂದ್ರರಾವ್, ಎಚ್.ಗಣಪತಿಯಪ್ಪ, ಎಲ್. ಬಸವರಾಜು, ಎ.ಎನ್. ಮೂರ್ತಿರಾವ್, ಚೆನ್ನವೀರ ಕಣವಿ, ಜಿ.ಎಚ್.ನಾಯಕ, ನಿಸಾರ್ ಅಹಮದ್ ಹಾಗೂ ಮುದೇನೂರು ಸಂಗಣ್ಣ. ಈ ಸಂದರ್ಶನಗಳು ಕರ್ನಾಟಕದ ಅಧ್ಯಯನ ಮಾಡುವವರಿಗೆ ಹೊಸಮಾಹಿತಿಗಳನ್ನು ಹಾಗೂ ಒಳನೋಟಗಳನ್ನು ಕೊಡುತ್ತವೆ.

**೬. ಕತ್ತಿಯಂಚಿನ ದಾರಿ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೬**
ಕೃತಿವಿಮರ್ಶೆಗಳೂ ವ್ಯಕ್ತಿಚಿತ್ರಗಳೂ ಇರುವ ಸಂಕಲನವಿದು. ಇದರಲ್ಲಿ ಕುವೆಂಪು ಹಾಗೂ ಕಾರಂತರ ಚಿಂತನೆ ಕುರಿತ ವಿಶ್ಲೇಷಣೆಯಿದೆ; ರಾಮಚಂದ್ರಶರ್ಮ ಹಾಗೂ ನಿಸಾರ್ ಅಹಮದರ ಕಾವ್ಯ, ತೇಜಸ್ವಿಯವರ 'ಮಾಯಾಲೋಕ', ಡಿ.ಆರ್ ನಾಗರಾಜ ಅವರ 'ಅಲ್ಲಮಪ್ರಭು ಮತ್ತು ಶೈವಪ್ರತಿಭೆ', ವಡ್ಡಾರಾಧನೆ, ಶೂನ್ಯಸಂಪಾದನೆ ಮುಂತಾದ ಕೃತಿಗಳ ವಿವೇಚನೆಯಿದೆ; ಬಸವಣ್ಣ ಹಾಗೂ ರಾಘವಾಂಕರ ಕಾವ್ಯತತ್ವದ ಚರ್ಚೆಯಿದೆ; ಕೆ.ವಿ.ಸುಬ್ಬಣ್ಣ, ಪಿ.ಲಂಕೇಶ್, ಎಚ್.ಎಂ.ಚನ್ನಯ್ಯ, ಪಿ.ಲಂಕೇಶ್, ಶಂಕರಮೊಕಾಶಿ ಪುಣೇಕರ ಅವರ ವ್ಯಕ್ತಿಚಿತ್ರಗಳಿವೆ.



PDF created with pdfFactory trial version www.pdffactory.com

**೭. ಧರ್ಮಪರೀಕ್ಷೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮**
೨೦೦೦ನೇ ಇಸವಿಯಿಂದ ಈಚೆಗೆ ಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಅನೇಕ ವಿದ್ಯಮಾನಗಳು ನಡೆದಿವೆ. ಈ ವಿದ್ಯಮಾನಗಳು ರಾಜಕೀಯವಾದವು, ಧಾರ್ಮಿಕವಾದವು ಹಾಗೂ ಸಾಮಾಜಿಕವಾದವು. ಈ ವಿದ್ಯಮಾನಗಳಿಗೆ ಪ್ರತಿಕ್ರಿಯಿಸುತ್ತ ಹುಟ್ಟಿದ ಚಿಂತನೆಗಳನ್ನು ಈ ಕೃತಿಯಲ್ಲಿ ಹಂಚಿಕೊಳ್ಳಲಾಗಿದೆ. ಇದರಲ್ಲಿ ಧರ್ಮ, ಕೋಮುವಾದ, ಮೂಲಭೂತವಾದ, ಇವನ್ನು ಬಳಸಿಕೊಳ್ಳುವ ನಮ್ಮ ಶಕ್ತಿರಾಜಕಾರಣ, ಇದರಿಂದಾಗುವ ಪರಿಣಾಮ, ಜನತೆ ತೋರುವ ನಿರ್ಲಿಪ್ತತೆ, ಪ್ರತಿರೋಧ, ನಾವು ಕಟ್ಟಬಯಸುವ ಸಮಾಜದ ಪರಿಕಲ್ಪನೆ ಕುರಿತ ಚಿಂತನೆಗಳು ಇಲ್ಲಿವೆ.

**೮. ಚಿಂತನೆಯ ಪಾಡು (ವಿಮರ್ಶಾ ಸಂಕಲನ), ಅಂಕಿತ ಪ್ರಕಾಶನ, ಬೆಂಗಳೂರು, ೨೦೧೦**
ಇದೊಂದು ವಿಮರ್ಶೆ ಸಂಕಲನ. ಇದರಲ್ಲಿ ಕನ್ನಡದ ೨೦ ಸಾಂಸ್ಕೃತಿಕ ಮಹತ್ವದ ಕೃತಿಗಳ ವಿಶ್ಲೇಷಣೆಯಿದೆ. ಸಾಮಾನ್ಯ ಓದುಗರನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಬರೆದಿರುವ ಈ ವಿಮರ್ಶೆಗಳು ನೇರವಾಗಿ ಸರಳವಾಗಿ ಇವೆ. ಕನ್ನಡ ಕೃತಿಗಳ ಮೇಲೆ ನಡೆಯುವ ಚಿಂತನೆಯು ಒಟ್ಟು ಕನ್ನಡ ಚಿಂತನೆಯ ಭಾಗವಾಗಿದೆ ಎಂಬ ನಂಬಿಕೆಯಲ್ಲಿ ಈ ಬರೆಹಗಳು ಹುಟ್ಟಿವೆ.

**ಸಂಪಾದಿತ ಕೃತಿಗಳು**
**೧. ಐವರು ಹೇಳಿದ ಜನಪದ ಕತೆಗಳು (ಸಂಪಾದನೆ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೩**
ತರೀಕೆರೆ ಸೀಮೆಯ ಜನಪದ ಕತೆಗಳನ್ನು ಇದರಲ್ಲಿ ಸಂಗ್ರಹಿಸಿ ಸಂಪಾದಿಸಲಾಗಿದೆ. ಹೆಚ್ಚಿನ ಕತೆಗಳಲ್ಲಿ ನಿರಾಕರಣೆಗೆ ಒಳಪಟ್ಟ ಮನುಷ್ಯರು ತಮ್ಮ ಪ್ರತಿಭೆ ಮತ್ತು ಜಾಣ್ಮೆ ಪ್ರಕಟಿಸಿ ವಿಜೇತರಾಗುವ ಆಶಯವನ್ನು ಒಳಗೊಂಡಿವೆ. ಈ ಕತೆಗಳನ್ನು ಹೇಳಿದ ಕತೆಗಾರರ ಪರಿಚಯ, ಕತೆಗಳಲ್ಲಿ ಬಳಕೆಯಾಗಿರುವ ವಿಶಿಷ್ಟ ಪದ, ನುಡಿಗಟ್ಟು ಹಾಗೂ ಗಾದೆಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

**೨. ಧರ್ಮ ವಿಶ್ವಕೋಶ, (ಸಂಪಾದನೆ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦**
ಹೊಸಶತಮಾನದ ಮೊದಲಘಟ್ಟದಲ್ಲಿ ಕನ್ನಡದ ಓದುಗರಿಗೆ ಕೆಲವು ಥೀಮುಗಳ ಮೇಲೆ ಹೊಸ ಬಗೆಯ ತಿಳಿವಳಿಕೆ ಮತ್ತು ದೃಷ್ಟಿಕೋನವನ್ನು ಕೊಡುವ ಬರೆಹಗಳನ್ನು ಒದಗಿಸುವ ಅಗತ್ಯವಿದೆ. ಧರ್ಮ ಕೋಶವು ಧರ್ಮದ ಬಗೆಗೆ ಹೊಸಬಗೆಯಲ್ಲಿ ಯೋಚಿಸುವ ಚಿಂತಕರ ಬರೆಹಗಳನ್ನು ಒಳಗೊಂಡಿದೆ.

**೩. ಕವಿರಾಜಮಾರ್ಗ: ಸಾಂಸ್ಕೃತಿಕ ಮುಖಾಮುಖಿ, (ಸಂ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦**
ಕನ್ನಡದ ಮೊದಲ ಕೃತಿಗಳಲ್ಲಿ ಒಂದಾದ ಕವಿರಾಜಮಾರ್ಗವನ್ನು ಹೊಸಬಗೆಯಲ್ಲಿ ಸಾಂಸ್ಕೃತಿಕವಾಗಿ ಅನುಸಂಧಾನ ಮಾಡುವ ದಿಸೆಯಲ್ಲಿ ನಡೆದ ವಿಚಾರಸಂಕಿರಣದ ಫಲಶೃತಿ ಈ ಕೃತಿ. ಇದರಲ್ಲಿ ನಾಡಿನ ದೊಡ್ಡ ವಿದ್ವಾಂಸರಾದ ಜಿಎಸ್.ಶಿವರುದ್ರಪ್ಪ, ಕೆ.ವಿ.ಸುಬ್ಬಣ್ಣ, ಎಂ.ಎಂ.ಕಲಬುರ್ಗಿ, ಕೆ.ವಿ.ನಾರಾಯಣ, ಕಿ.ರಂ.ನಾಗರಾಜ, ಬಂಜಗೆರೆ ಜಯಪ್ರಕಾಶ ಮುಂತಾದವರ ಚಿಂತನಶೀಲ ಬರೆಹಗಳು ಇದರಲ್ಲಿವೆ.

**೪. ಅಕ್ಕನ ವಚನಗಳು: ಸಾಂಸ್ಕೃತಿಕ ಮುಖಾಮುಖಿ, (ಸಂ) ೨೦೦೫**
ಕನ್ನಡದ ವಚನಕಾರ್ತಿಯೂ ಯೋಗಿನಿಯೂ ಆದ ಅಕ್ಕಮಹಾದೇವಿ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ತನ್ನಿಚ್ಛೆಯಂತೆ ಬದುಕುವ ಸ್ವಾತಂತ್ರ್ಯ ಬಯಸುವ ಎಲ್ಲರ ಪ್ರತೀಕ. ಮಹಿಳಾ ಸಂವೇದನೆಯ ಬರೆಹವು ಈಕೆಯ ದಿಟ್ಟತನವನ್ನು ಒಂದು ರೂಪಕದಂತೆ ಅನುಸಂಧಾನ ಮಾಡಿಕೊಂಡು ಬಂದಿದೆ. ಅತ್ಯುತ್ತಮ ಕವಿಯೂ ಆದ ಅಕ್ಕನ ವಚನಗಳನ್ನು ಹೊಸತಲೆಮಾರಿನ ಪ್ರತಿಭೆಗಳು, ಅದರಲ್ಲೂ ಸಮಾಜದ ಬೇರೆಬೇರೆ ಕ್ಷೇತ್ರಗಳಲ್ಲಿ ದುಡಿಮೆ ಮಾಡುತ್ತಿರುವವರು ಸೇರಿ ಮಾಡಿದ ಮಂಥನದ ಫಲ ಈ ಕೃತಿ.

**೫. ಕುಮಾರವ್ಯಾಸ ಭಾರತ : ಸಾಂಸ್ಕೃತಿಕ ಮುಖಾಮುಖಿ, (ಸಂ) ೨೦೦೩**
ಕನ್ನಡದ ಪ್ರಮುಖ ಕವಿಯಾದ ಕುಮಾರವ್ಯಾಸನ ಗದುಗಿನ ಭಾರತದ ಮೇಲೆ ಶಿವಮೊಗ್ಗೆಯಲ್ಲಿ ನಡೆದ ವಿಚಾರಸಂಕಿರಣದ ಭಾಗವಾಗಿ ಈ ಕೃತಿ ಪ್ರಕಟವಾಗಿದೆ. ಇದರಲ್ಲಿ ಕರ್ನಾಟಕದ ಇಬ್ಬರು ಕುಮಾರವ್ಯಾಸ ವಿದ್ವಾಂಸರಾದ ಕೀರ್ತಿನಾಥ ಕುರ್ತಕೋಟಿ ಹಾಗೂ ಕಿ.ರಂ.ನಾಗರಾಜ ಅವರ ಉದ್ಘಾಟನೆ ಮತ್ತು ಸಮಾರೋಪ ಭಾಷಣದ ಬರೆಹ ರೂಪಗಳಿವೆ. ಕುಮಾರವ್ಯಾಸನನ್ನು ಕಾವ್ಯದ ನೆಲೆಯಿಂದ ಮಾತ್ರವಲ್ಲದೆ, ಗಮಕ ಇತ್ಯಾದಿ ನೆಲೆಯಿಂದಲೂ ನೋಡಿರುವ ಲೇಖನಗಳು ಇದರಲ್ಲಿವೆ. ಕುಮಾರವ್ಯಾಸ ಕಾವ್ಯದ ಬಗ್ಗೆ ಇದುವರೆಗೂ ಬಂದಿರುವ ಅಧ್ಯಯನಗಳ ಮಾಹಿತಿಯಿದೆ.

**೬. ಕನ್ನಡ ಮಾತು ತಲೆಯೆತ್ತುವ ಬಗೆ ಕನ್ನಡ ಸಾಹಿತ್ಯ ಮೀಮಾಂಸೆ-೧ ೨೦೦೫**



PDF created with pdfFactory trial version www.pdffactory.com

ಕನ್ನಡದಲ್ಲಿಯೂ ಅದರದ್ದೇ ಆದ ಸಾಹಿತ್ಯ ಮೀಮಾಂಸೆ ಇದೆ. ಅದನ್ನು ನಾವು ಪಡೆದುಕೊಂಡು ಶೈಕ್ಷಣಿಕ ವಲಯದಲ್ಲಿ ಬಳಕೆಮಾಡಬೇಕು ಎಂಬ ಉದ್ದೇಶದಿಂದ ಸಿದ್ಧಗೊಂಡ ಕೃತಿಯಿದು. ಇದರಲ್ಲಿ ಬಿಎಂಶ್ರೀ ಅವರಿಂದ ಹಿಡಿದು ಜಿ. ರಾಜಶೇಖರ ತನಕ ಕನ್ನಡದ ಬೇರೆಬೇರೆ ಲೇಖಕರು ಬರೆದ ಲೇಖನಗಳಿವೆ. ಅವುಗಳ ಒಳಗಿರುವ ಸಾಹಿತ್ಯ ತತ್ವದ ಚರ್ಚೆಯನ್ನು ಕುರಿತು ಟಿಪ್ಪಣಿಗಳನ್ನು ಬರೆಯಲಾಗಿದೆ. ಕನ್ನಡ ಸಾಹಿತ್ಯ ಮೀಮಾಂಸೆಯ ಪರಿಕಲ್ಪನೆಯ ಬಗ್ಗೆ ವಿಸ್ತಾರವಾದ ಪ್ರಸ್ತಾವನೆಯಿದೆ.

**೭. ಇಂಗ್ಲಿಷ್ ಗೀತಗಳು: ಸಾಂಸ್ಕೃತಿಕ ಮುಖಾಮುಖಿ, ೨೦೦೭**

೨೦ನೇ ಶತಮಾನದ ಮೊದಲ ಘಟ್ಟದಲ್ಲಿ ಪ್ರಕಟವಾದ ಬಿಎಂಶ್ರೀಕಂಠಯ್ಯನವರ 'ಇಂಗ್ಲಿಷ್ ಗೀತಗಳು' ಎಂಬ ಸಂಕಲನವು ಆಧುನಿಕ ಕನ್ನಡ ಕಾವ್ಯದ ಬೆಳವಣಿಗೆಯಲ್ಲಿ ಆಡಿದ ಪಾತ್ರವು ಚಾರಿತ್ರಕ ಮಹತ್ವದ್ದಾಗಿದೆ. ೨೧ ಶತಮಾನದ ಮೊದಲಲ್ಲಿ ಈ ಪಠ್ಯದ ಮರುಓದು ಮತ್ತು ಮರುಮೌಲ್ಯಮಾಪನ ಮಾಡುವ ಉದ್ದೇಶದಿಂದ ನಡೆದ ವಿಚಾರ ಸಂಕಿರಣದ ಪ್ರಬಂಧಗಳು ಇದರಲ್ಲಿವೆ. ಇದರಲ್ಲಿ ಬಿಎಂಶ್ರೀಯವರ ಶಿಷ್ಯರಾಗಿದ್ದವರಿಂದ ಹಿಡಿದು ಈಚಿನ ಹೊಸಲೇಖಕರ ತನಕ ಹಲವು ತಲೆಮಾರುಗಳ ವಿದ್ವಾಂಸರ ಪ್ರತಿಕ್ರಿಯೆಗಳಿವೆ. ಸಂಕಿರಣದದಲ್ಲಿ ನಡೆದ ಇಡೀ ಚರ್ಚೆಯನ್ನು ಒಳಗೊಂಡಿರುವುದು ಇದರ ವಿಶೇಷತೆ.

**೮. ಹೊಸತಲೆಮಾರಿನ ತಲ್ಲಣ, ೨೦೦೮**

೨೧ನೇ ಶತಮಾನದ ಈ ಆರಂಭದ ಈ ಹೊತ್ತಲ್ಲಿ ಅನೇಕ ಹೊಸತಲೆಮಾರಿನ ಲೇಖಕರು ಬರೆಯುತ್ತಿದ್ದಾರೆ. ಅವರಿಗೆ ಸಾಹಿತ್ಯಸೃಷ್ಟಿ, ಅದರ ಸಂವಹನ, ಓದುಗರು, ಸಾಹಿತ್ಯ ಪರಂಪರೆ, ಸಮಾಜ, ಸಮಾಜವನ್ನು ಪರೋಕ್ಷವಾಗಿ ಪ್ರಭಾವಿಸುತ್ತಿರುವ ರಾಜಕೀಯ-ಆರ್ಥಿಕ ವಿದ್ಯಮಾನಗಳು, ಇತ್ಯಾದಿ ಕುರಿತು ಅವರದ್ದೇ ಆದ ವಿಶಿಷ್ಟ ಚಿಂತನೆಗಳಿವೆ. ಇಂತಹ ಚಿಂತನೆಗಳ ಸಂಕಲನವಿದು. ಈ ಚಿಂತನೆಗಳನ್ನು ಇಟ್ಟುಕೊಂಡು ತಾತ್ವಿಕ ವಿಶ್ಲೇಷಣೆ ಮಾಡಿರುವ ಸುದೀರ್ಘವಾದ ಪ್ರಸ್ತಾವನೆ ಇದರಲ್ಲಿದೆ.

**೧೬. ಪ್ರಕಟಿತ ಪ್ರಮುಖ ೧೦ ಲೇಖನಗಳು**

**೧. ಪಾವಿತ್ರ್ಯ ನಾಶವೂ ಪ್ರತಿಸಂಸ್ಕೃತಿ ನಿರ್ಮಾಣವೂ (೧೯೯೨)**

ನಮ್ಮ ಸಮಾಜದಲ್ಲಿ ಅನೇಕ ಸಂಗತಿಗಳು ಪವಿತ್ರಗೊಂಡುಬಿಟ್ಟಿವೆ. ಅವುಗಳಲ್ಲಿ ಪ್ರತಿಗಾಮಿ ಮೌಲ್ಯಗಳೂ ಸೇರಿವೆ. ಇದರಿಂದಾಗಿ ಕೂಡ ಇವು ಪ್ರಶ್ನಾತೀತವಾಗಿ ಮುಂದುವರೆಯುತ್ತಿವೆ. ಸಮಾಜವಾದಿ ಸಮಾಜ ನಿರ್ಮಾಣ ಮಾಡಲು ಹೊರಡುವ ಯಾರೇ ಆಗಲಿ, ಪವಿತ್ರೀಕರಿಸಲ್ಪಟ್ಟಿರುವ ಈ ಜೀವವಿರೋಧಿ ಅಂಶಗಳ ಪಾವಿತ್ರ್ಯವನ್ನು ನಾಶಮಾಡಬೇಕು. ಬಳಿಕ ಅವುಗಳ ನಾಶದ ಜಾಗದಲ್ಲಿ ಹೊಸ ಮೌಲ್ಯಗಳ ನಿರ್ಮಾಣವಾಗಬೇಕು. ಈ ಕಾರ್ಯವನ್ನು ಹೊಸ ಸಮಾಜದ ಕನಸು ಕಾಣುವ ಎಲ್ಲರೂ ಬೇರೆಬೇರೆ ಬಗೆಯಲ್ಲಿ ಮಾಡಿಕೊಂಡು ಬಂದಿದ್ದಾರೆ. ಸಾಹಿತ್ಯದ ಆಕರವನ್ನು ಇಟ್ಟುಕೊಂಡು ಈ ನಾಶ ಮತ್ತು ನಿರ್ಮಾಣದ ಪ್ರಕ್ರಿಯೆಯನ್ನು ಶೋಧಿಸುವ ಯತ್ನವಿಲ್ಲಿದೆ.

**೨. ಗ್ರಾಮದೇವತೆಗಳು ಹಾಗೂ ಊರೊಟ್ಟಿನ ಸಂಬಂಧ (೧೯೯೩)**

ಕರ್ನಾಟಕದ ಎಲ್ಲ ಊರುಗಳಲ್ಲಿ ಒಂದಲ್ಲಾ ಒಂದು ಗ್ರಾಮದೇವತೆಯ ಗುಡಿಯಿದೆ. ಅದರ ಸುತ್ತ ಅನೇಕ ಆಚರಣೆಗಳು ನಡೆದುಬಂದಿವೆ. ಈ ಆಚರಣೆಯ ಹೊತ್ತಲ್ಲಿ ಊರು ತನ್ನ ಅನೇಕ ಭೇದಗಳನ್ನು ಮರೆತು ವಿಚಿತ್ರವಾಗಿ ಒಂದುಗೂಡುತ್ತದೆ. ಇದನ್ನು ಅನೇಕ ವಿದ್ವಾಂಸರು ಜಾತಿ ವರ್ಗಭೇದಗಳನ್ನು ಅಳಿಸಿಹಾಕುವ ಸಾಮರಸ್ಯವೆಂದು ವೈಭವೀಕರಿಸುವುದುಂಟು. ಆದರೆ ವಾಸ್ತವವಾಗಿ ಈ ಸಾಮರಸ್ಯದೊಳಗೆ ಮುಂದುವರೆಯುವ ವೈರುಧ್ಯ ತಾರತಮ್ಯಗಳು ಯಾವುವು? ಇದರ ವಿವೇಚನೆ ಈ ಲೇಖನದಲ್ಲಿದೆ.

**೩. ಕುವೆಂಪು: ಸಾಂಸ್ಕೃತಿಕ ವೈರುಧ್ಯಗಳ ಪಯಣಿಗನಾಗಿ (೧೯೯೫)**

ಕನ್ನಡದ ಮಹತ್ವದ ಲೇಖಕರಲ್ಲಿ ಒಬ್ಬರಾದ ಕುವೆಂಪು ಅವರು, ಅನೇಕ ಚಾರಿತ್ರಿಕ ಇಕ್ಕಟ್ಟುಗಳಲ್ಲಿ ಬರೆದವರು. ಅವರ ಬರೆಹದಲ್ಲಿ ತಾತ್ವಿಕ ಬಿಕ್ಕಟ್ಟುಗಳಿವೆ. ಅವನ್ನು ಬಿಟ್ಟುಕೊಟ್ಟು ಅವರನ್ನು ವೈಭವೀಕರಿಸುವುದಾಗಲಿ, ತಿರಸ್ಕರಿಸುವುದಾಗಲಿ ಸಾಧ್ಯವಿಲ್ಲ. ಕುವೆಂಪು ಅವರಲ್ಲಿ ಇರುವ ಅನೇಕ ವೈರುಧ್ಯಗಳನ್ನು ಇಲ್ಲಿ ಚರ್ಚಿಸಲಾಗಿದೆ. ಅನೇಕ ಸಲ ಈ ವೈರುಧ್ಯಗಳೇ ಅವರನ್ನು ದೊಡ್ಡ ಲೇಖಕರನ್ನಾಗಿ ಮಾಡಿರುವುದು ತಿಳಿಯುತ್ತದೆ. ಈ ಚರ್ಚೆಯನ್ನು ಅವರ ಸಾಂಸ್ಕೃತಿಕ ಮಹತ್ವವನ್ನು ಅಲ್ಲಗಳೆಯದೆ ಮಾಡಲಾಗಿದೆ.

**೪. ಮುಸ್ಲಿಂ ಜಾನಪದ ಎಂಬುದು ಇದೆಯೆ? (೧೯೯೮)**

ಕನ್ನಡ ಜಾನಪದವನ್ನು ಧರ್ಮದ ಹೆಸರಲ್ಲಿ ನೋಡುವ ಪ್ರವೃತ್ತಿ ಈಚೆಗೆ ಕನ್ನಡದಲ್ಲಿ ಕಾಣಿಸಿಕೊಂಡಿದೆ.



PDF created with pdfFactory trial version www.pdffactory.com

ಇದರಿಂದ ಬಹುಧರ್ಮೀಯ ನೆಲೆಯಿಂದ ಜಾತ್ಯತೀತ ನೆಲೆಯಲ್ಲಿ ಹುಟ್ಟಿರುವ ಜಾನಪದವನ್ನು ನಿರ್ದಿಷ್ಟ ಧರ್ಮದ ಸಾಮಗ್ರಿಯನ್ನಾಗಿ ಗ್ರಹಿಸಿಬಿಡುವ ಸಮಸ್ಯೆಯಿದೆ. ವಾಸ್ತವದಲ್ಲಿ ಕನ್ನಡ ಜಾನಪದದಲ್ಲಿರುವ ಮೊಹರಂ ಸೂಫಿಪಂಥ ಕುರಿತ ಸಾಹಿತ್ಯವು, ಮುಸ್ಲಿಂ ಕವಿಗಳು ಹಾಡುಗಾರರು, ಅನುಭಾವಿಗಳು, ತಮ್ಮ ಧರ್ಮದ ಸಾಂಪ್ರದಾಯಕ ರೂಪದ ಜತೆಗೆ ಸಂಘರ್ಷ ಮಾಡುತ್ತ ಮೂರನೆಯ ಒಂದು ನೆಲೆಯನ್ನು ರೂಪಿಸಿಕೊಂಡಿರುವರು. ಅಂತಹ ನೆಲೆಯನ್ನು ಈ ಲೇಖನ ವಿಶ್ಲೇಷಿಸುತ್ತದೆ.

**೫. ದತ್ತಾತ್ರೇಯ ಬಾಬಾಬುಡನ್ ಎತ್ತಣ ಸಂಬಂಧ? (೧೯೯೯)**

ಕರ್ನಾಟಕದ ಸೂಫಿ ತಾಣಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನಗಿರಿಯೂ ಒಂದು. ಕರ್ನಾಟಕದಿಂದ ಮಾತ್ರವಲ್ಲದೆ ದೇಶದ ಅನೇಕ ಭಾಗಗಳಿಂದ ಧರ್ಮಾತೀತವಾಗಿ ಬರುವ ಭಕ್ತರು ನಡೆದುಕೊಳ್ಳುವ ಜಾಗವಿದು. ಸೂಫಿಸಂತರೂ ದತ್ತಪಂಥದ ಯತಿಯೂ ಒಟ್ಟಿಗೆ ಇದ್ದರೆಂದು ನಂಬಲಾಗುವ ಈ ಜಾಗವು, ವಾಸ್ತವದಲ್ಲಿ ಸೂಫಿ ಮತ್ತು ಇತರೆ ಗುರುಪಂಥಗಳ ನಡುವಣ ದಾರ್ಶನಿಕ ಮತ್ತು ಚಾರಿತ್ರಿಕ ಮಿಲನಗಳ ಫಲವಾಗಿದೆ. ಈ ಪಂಥಗಳ ಸಂಕರದ ಸ್ವರೂಪವನ್ನು ವಿಶ್ಲೇಷಿಸುವ ಲೇಖನವಿದು.

**೬. ಜಾಗತೀಕರಣದ ಚರ್ಚೆ: ಸಂಸ್ಕೃತಿ ನುಡಿಗಟ್ಟಿನಲ್ಲಿ (೨೦೦೨)**

ಜಾಗತೀಕರಣವು ಮೂಲತಃ ಒಂದು ಆರ್ಥಿಕೊ ರಾಜಕೀಯ ವಿದ್ಯಮಾನವಾಗಿದೆ. ಅದು ಭಾರತದ ಜನಬದುಕಿನ ಅನೇಕ ವಲಯಗಳ ಮೇಲೆ ತನ್ನ ಪ್ರಭಾವ ಬಿರುತ್ತಿದೆ. ಆದರೆ ಕನ್ನಡದಲ್ಲಿ ಅದು ನಮ್ಮ ಸಂಸ್ಕೃತಿಯ ಮೇಲೆ ದುಷ್ಪರಿಣಾಮ ಬಿರುತ್ತಿದೆ ಎಂಬ **ಅಸ್ಪಷ್ಟ ಮತ್ತು ಭಾವುಕ** ನೆಲೆಯಲ್ಲಿ ಅದಕ್ಕೆ ಪ್ರತಿರೋಧಗಳು ಬರುತ್ತಿವೆ. ಬಹುರೂಪಿಯಾದ ಒಂದು ವಿದ್ಯಮಾನಕ್ಕೆ ಸೀಮಿತ ನೆಲೆಯಲ್ಲಿ ಪ್ರತಿರೋಧ ಮಾಡುವಾಗ ಅನೇಕ ಸಂಗತಿಗಳು ಬಿಟ್ಟುಹೋಗುತ್ತವೆ. ತಾತ್ವಿಕವಾಗಿ ಅಸಮಗ್ರವಾದ ಧೋರಣೆ ತಳೆಯಲು ಇದು ಕಾರಣವಾಗುತ್ತದೆ. ಈ ಬಿಕ್ಕಟ್ಟನ್ನು ಕುರಿತು ಲೇಖನ ಚರ್ಚಿಸುತ್ತದೆ.

**೭. ಭಾರತೀಯ ಕಾವ್ಯಮೀಮಾಂಸೆ ನಮಗೆ ಬೇಕೇ? (೨೦೦೮)**

ಕನ್ನಡದ ಸಾಹಿತ್ಯ ಅಧ್ಯಯನಗಳಲ್ಲಿ ಸಂಸ್ಕೃತ ಕಾವ್ಯಮೀಮಾಂಸೆಯನ್ನು ಭಾರತೀಯ ಎಂಬ ಹೆಸರಲ್ಲಿ ಕಲಿಸಲಾಗುತ್ತಿದೆ. ಒಂದು ಜ್ಞಾನವಾಗಿ ಕನ್ನಡಕ್ಕೆ ಇದು ಬೇಕು. ಆದರೆ ಇದರಿಂದ ಕನ್ನಡದ ಶೈಕ್ಷಣಿಕ ಅಧ್ಯಯನಗಳಲ್ಲಿ ಕೆಲವು ಅಡ್ಡಪರಿಣಾಮಗಳಾಗಿವೆ. ಕನ್ನಡದ್ದೇ ಆದ ಸಾಹಿತ್ಯ ಚಿಂತನೆಯನ್ನು ಕಂಡುಕೊಳ್ಳುವುದಕ್ಕೂ ಅದನ್ನು ಔಪಚಾರಿಕ ಸಾಹಿತ್ಯ ಅಧ್ಯಯನಗಳಲ್ಲಿ ಅಳವಡಿಸುವುದಕ್ಕೂ ತೊಡಕಾಗಿದೆ. ಜತೆಗೆ ಸಂಸ್ಕೃತ ಕಾವ್ಯಮೀಮಾಂಸರು ದೇಶೀಭಾಷೆಗಳಲ್ಲಿ ಇರುವ ಸಾಹಿತ್ಯತತ್ವಗಳೆಲ್ಲ ಸಂಸ್ಕೃತದಿಂದ ಹೋದವು ಎಂಬ ಗ್ರಹಿಕೆಯನ್ನು ರೂಢಿಸಿರುವರು. ಇದು ಸರಿಯಲ್ಲ. ಈ ಹಿನ್ನೆಲೆಯಲ್ಲಿ ತೀನಂಶ್ರೀಯವರ 'ಭಾರತೀಯ ಕಾವ್ಯಮೀಮಾಂಸೆ' ಕೃತಿಯನ್ನು ಇಟ್ಟುಕೊಂಡು ನಡೆಸಿರುವ ಒಂದು ಚರ್ಚೆಯಿಲ್ಲಿದೆ.

**೮. ಕನ್ನಡ ಗದ್ಯದ ಅಧೋಲೋಕಗಳು (೨೦೦೮)**

ಕನ್ನಡ ಗದ್ಯಸಾಹಿತ್ಯದಲ್ಲಿ ಕತೆ ಕಾದಂಬರಿಗಳನ್ನು ಪ್ರಧಾನವಾಗಿ ಚರ್ಚಿಸಲಾಗುತ್ತದೆ. ಆದರೆ ಗದ್ಯದಲ್ಲಿ ಆತ್ಮಚರಿತ್ರೆಯಂತಹ ಪ್ರಕಾರಗಳನ್ನು ಹೆಚ್ಚಾಗಿ ಚರ್ಚಿಸುವುದಿಲ್ಲ. ಬದುಕಿನ ಬೇರೆಬೇರೆ ಕ್ಷೇತ್ರದಲ್ಲಿರುವವರು ತಮ್ಮ ಅನುಭವ ಚಿಂತನೆ ಹಂಚಿಕೊಳ್ಳುವ ವೇದಿಕೆಯಂತಿರುವ ಈ ಪ್ರಕಾರದ ಸಾಹಿತ್ಯವು ಕನ್ನಡ ಸಾಹಿತ್ಯದ ಅಧೋಲೋಕವಿದ್ದಂತೆ. ಇಲ್ಲಿ ಅಪೂರ್ವವಾದ ಅನುಭವಗಳು ಮಾತ್ರವಲ್ಲ, ಕನ್ನಡ ಗದ್ಯದ ಬೇರೆಬೇರೆ ವಿನ್ಯಾಸಗಳೂ ಇವೆ. ಈ ಗದ್ಯಪ್ರಕಾರವು ಸಾಂಸ್ಕೃತಿಕವಾಗಿ ಮುಖ್ಯವಾಗಿದೆ. ಇದನ್ನು ಕುರಿತ ಚರ್ಚೆ ಈ ಲೇಖನದಲ್ಲಿದೆ. ಕನ್ನಡದ ಆತ್ಮಕಥೆಗಳ ಸೂಚಿಯನ್ನು ಕಡೆಗೆ ಕೊಡಲಾಗಿದೆ.

**೯. ಹೊಳೆಗಳ ಮೂಲಕ ಕರ್ನಾಟಕ (೨೦೦೯)**

ಕರ್ನಾಟಕವನ್ನು ಕಾವೇರಿಯಿಂದ ಗೋದಾವರಿಯವರೆಗೆ ಇರುವ ನಾಡೆಂದು, ಕನ್ನಡದ ಮೊದಲ ಪಠ್ಯ ಬಣ್ಣಿಸುತ್ತದೆ. ಕರ್ನಾಟಕವನ್ನು ಪಥಗಳ ಮೂಲಕ ಆಹಾರಪದ್ಧತಿಯ ಮೂಲಕ ಅಥವಾ ಬೆಳೆಗಳ ಮೂಲಕ ನೋಡುವಂತೆ, ಹೊಳೆಗಳ ಮೂಲಕವೂ ನೋಡಬಹುದು. ಜನಸಮುದಾಯಗಳ ಬದುಕಿನ ಭಾಗವಾಗಿರುವ ಹೊಳೆಗಳ ಮೂಲಕ ಕರ್ನಾಟಕವನ್ನು ನೋಡಲು ಈ ಲೇಖನದಲ್ಲಿ ಯತ್ನಿಸಿದೆ. ಹೊಳೆಗಳ ಹುಟ್ಟು ಹರಿವು ನಿಲುವು ಪಾತ ಹಾಗೂ ಅಳಿವುಗಳ ಹಂತಗಳನ್ನು ಅಲ್ಲಿ ನಿರ್ಮಾಣವಾಗಿರುವ ಸಂಸ್ಕೃತಿಯನ್ನು ಇದರಲ್ಲಿ ವಿಶ್ಲೇಷಿಸಿದೆ.

**೧೦. ಬಂಗಾಲದ ಬಾವುಲರು (೨೦೧೦)**



PDF created with pdfFactory trial version www.pdffactory.com

ಬಂಗಾಳದಲ್ಲಿ ಬಾವುಲರು ಎಂದು ಕರೆಯಲ್ಪಡುವ ಒಂದು ಗಾಯಕ ಸಮುದಾಯವಿದೆ. ಬಾವುಲರು ಸೂಫಿಗಳಂತೆ, ಅನುಭಾವಿ ಪಂಥಕ್ಕೆ ಸೇರಿದವರು. ಅವರ ಗುರು ಚೈತನ್ಯ ಪ್ರಭು ಹಾಗೂ ಲಾಲನ್ ಫಕೀರ್ ಎಂಬ ಸೂಫಿಸಂತ. ಜಾತಿಪದ್ಧತಿಯನ್ನು ಒಪ್ಪದ ಬಾವುಲರು ತಿರುಗಾಡಿಗಳು. ಶಾಂತಿನಿಕೇತನದ ಸುತ್ತಮುತ್ತ ಇರುವ ಬಾವುಲರ ಜತೆ ಒಡನಾಡಿ ಬಂದ ಅನುಭವವನ್ನು ಈ ಲೇಖನ ನಿರೂಪಿಸುತ್ತದೆ.

೧೭. ಮಾರ್ಗದರ್ಶನ

**ಅಭ್ಯರ್ಥಿಗಳು ಶೀರ್ಷಿಕೆ ಪದವಿಘೋಷಿಸಿದ ದಿನಾಂಕ**

**೧. ಎನ್. ಅಮರೇಶ, ಹೈದರಾಬಾದ್ ಕರ್ನಾಟಕದ ಸಾಹಿತ್ಯ ಮತ್ತು ಸಾಮಾಜಿಕ ವಾಸ್ತವ, ೧೯೯೮**

ಹೈದರಾಬಾದ್ ಕರ್ನಾಟಕವು ತನ್ನದೇ ಆದ ಚಾರಿತ್ರಿಕ, ಭಾಷಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಭಾಗವಾಗಿದೆ. ಇಲ್ಲಿನ ರಾಜಕೀಯ ಸಾಮಾಜಿಕ ಚಾರಿತ್ರಿಕ ವಿದ್ಯಮಾನಗಳಿಗೆ ಈ ಭಾಗದ ಸಾಹಿತ್ಯವು ವಿಶಿಷ್ಟವಾಗಿ ಪ್ರತಿಸ್ಪಂದಿಸಿದೆ. ಈ ಪ್ರತಿಸ್ಪಂದನ ಪರಿಯನ್ನು ಮುಖ್ಯವಾಗಿ ತತ್ವಪದಸಾಹಿತ್ಯ ಮತ್ತು ಆಧುನಿಕ ಸಾಹಿತ್ಯದ ಬೇರೆಬೇರೆ ಪ್ರಕಾರಗಳ ಆಧಾರದಲ್ಲಿ ವಿಶ್ಲೇಷಿಸುವ ಕಾರ್ಯವನ್ನು ಈ ಪ್ರಬಂಧವು ಮಾಡುತ್ತದೆ.

**೨. ಮುದೇನೂರ ನಿಂಗಪ್ಪ, ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರು, ೨೦೦೨**

ಕನ್ನಡದಲ್ಲಿ ಜನಪದ ಮಹಾಕಾವ್ಯಗಳ ಸಂಗ್ರಹ ಮತ್ತು ಪ್ರಕಟಣೆಯು ಇವುಗಳ ಅಧ್ಯಯನಕ್ಕೆ ಪ್ರೇರಿಸಿದೆ. ಇವುಗಳ ಅಧ್ಯಯನಕ್ಕಾಗಿ ಕೇವಲ ಸಾಹಿತ್ಯಕವಲ್ಲದ ಮತ್ತು ಚರಿತ್ರೆ ಸಮಾಜ ರಾಜಕಾರಣದ ನೆಲೆಯಿಂದ ನೋಡುವ ಬಹುಶಿಸ್ತೀಯ ಅಧ್ಯಯನ ವಿಧಾನವೂ ರೂಪುಗೊಂಡಿದೆ. ಈ ಹಿನ್ನೆಲೆಯಲ್ಲಿ ಮೈಲಾರಲಿಂಗ, ಜುಂಜಪ್ಪ, ಮಲೆ ಮಾದೇಶ್ವರ, ಮಂಟೆಸ್ವಾಮಿ–ಈ ನಾಲ್ಕು ಸಾಂಸ್ಕೃತಿಕ ನಾಯಕರನ್ನು ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

**೩. ಸಿ.ಜಿ.ಲಕ್ಷ್ಮೀಪತಿ, ಕರ್ನಾಟಕ ಸಮಾಜಬದಲಾವಣೆ: ಸಮಾಜಶಾಸ್ತ್ರ ಹಾಗೂ ಸಾಹಿತ್ಯ ನೋಡಿರುವ ಬಗೆ, ೨೦೦೩**

ಇದೊಂದು ಅಂತರ್‌ಶಿಸ್ತೀಯ ಅಧ್ಯಯನ. ಸಮಾಜಶಾಸ್ತ್ರದ ವಿದ್ಯಾರ್ಥಿಯೊಬ್ಬರು ಕನ್ನಡ ಕಾದಂಬರಿಗಳನ್ನು, ಅವುಗಳಲ್ಲಿರುವ ಸಾಮಾಜಿಕ ಬದಲಾವಣೆಯ ಚಿತ್ರಣಗಳನ್ನು ಸಮಾಜಶಾಸ್ತ್ರದ ದೃಷ್ಟಿಯಿಂದ ನೋಡಿರುವ ಅಧ್ಯಯನವಿದು. ಕಾನೂರು ಹೆಗ್ಗಡಿತಿ, ಭಾರತಿಪುರ, ದಾಟು, ಕುಸುಮಬಾಲೆ ಕಾದಂಬರಿಗಳನ್ನು ಇಟ್ಟುಕೊಂಡು ಅವು ಹೇಗೆ ಸಮಾಜಶಾಸ್ತ್ರಕಾರರಿಗಿಂತ ಭಿನ್ನವಾಗಿ ವಿಶಿಷ್ಟವಾಗಿ ಸಂಕೀರ್ಣವಾಗಿ ಸಮಾಜವನ್ನು ಕಾಣಿಸುತ್ತವೆ ಎಂಬ ವಿಶ್ಲೇಷಣೆಯಿಲ್ಲಿದೆ.

**೪. ಬಾಳಾಸಾಹೇಬ ಲೋಕಾಪುರ, ಜೈನ ಕಥನಸಾಹಿತ್ಯದಲ್ಲಿ ಜೈನಸಂವೇದನೆ, ೨೦೦೪**

ಕನ್ನಡದಲ್ಲಿ ಸಂವೇದನೆಯ ನೆಲೆಯಲ್ಲಿ ಸಾಹಿತ್ಯವನ್ನು ನೋಡುವ ಕ್ರಮವೊಂದು ಆರಂಭವಾಗಿದೆ. ದಲಿತ, ಮುಸ್ಲಿಂ, ಮಹಿಳಾ ಸಂವೇದನೆಗಳ ಹಾಗೆ, ಜೈನ ಸಂವೇದನೆಯ ಮೂಲಕವೂ ಸಾಹಿತ್ಯ ಅಧ್ಯಯನ ಮಾಡಬಹುದು. ಈ ಪ್ರಬಂಧದಲ್ಲಿ ಆಧುನಿಕ ಕನ್ನಡ ಸಾಹಿತ್ಯವನ್ನು ಜೈನಸಂವೇದನೆಯ ಮೂಲಕ ಪ್ರವೇಶಿಸಿ, ಅನೇಕ ವಿಶ್ಲೇಷಣೆಗಳನ್ನು ಮಾಡಲಾಗಿದೆ. ಪ್ರಾಚೀನ ಜೈನಸಾಹಿತ್ಯಕ್ಕೂ ಆಧುನಿಕ ಜೈನ ಲೇಖಕರು ಬರೆದ ಸಾಹಿತ್ಯಕ್ಕೂ ಸಂವೇದನೆಯ ದೃಷ್ಟಿಯಿಂದ ಇರುವ ವ್ಯತ್ಯಾಸಗಳನ್ನು ಚರ್ಚಿಸಿದೆ. ಜೈನವಸ್ತುವನ್ನು ಇಟ್ಟುಕೊಂಡು ಜೈನರಲ್ಲರದವರು ಬರೆದ ಸಾಹಿತ್ಯವನ್ನು ಸಹ ಗಮನಿಸಿದೆ.

**೫. ಎನ್.ಎಚ್. ರವಿಕುಮಾರ್, ಕನ್ನಡ ವಿಮರ್ಶೆಯಲ್ಲಿ ಪುಸ್ತಕ ವಿಮರ್ಶೆಯ ಸ್ಥಾನ, ೨೦೦೪**

ಕನ್ನಡ ವಿಮರ್ಶೆಯ ಭಾಗವಾಗಿಯೂ ಹೆಚ್ಚು ಚರ್ಚೆಗೆ ಒಳಗಾಗದ ಸಂಗತಿಗಳಲ್ಲಿ ಪುಸ್ತಕ ವಿಮರ್ಶೆಯೂ ಒಂದು. ಪ್ರಸ್ತುತ ಪ್ರಬಂಧದಲ್ಲಿ ಕನ್ನಡದಲ್ಲಿ ಪುಸ್ತಕ ವಿಮರ್ಶೆಯ ಪ್ರಮುಖ ಘಟ್ಟಗಳನ್ನು ಚಾರಿತ್ರಿಕ ವಿವೇಚನೆ; ಈ 'ಪ್ರಕಾರ'ವನ್ನು ರೂಪಿಸಿರುವ ಪ್ರತಿಕೆ, ಪುಸ್ತಕೋದ್ಯಮ ಮುಂತಾದ ಸಂಗತಿಗಳ ಪ್ರಸ್ತಾಪ; ಪ್ರಮುಖ ಪುಸ್ತಕ ವಿಮರ್ಶಕರ ಪರಿಚಯ; ಕೆಲವು ಪ್ರಾತಿನಿಧಿಕ ವಿಮರ್ಶೆಯ ಬರೆಹಗಳ ವಿಶ್ಲೇಷಣೆ; ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಪುಸ್ತಕ ವಿಮರ್ಶೆಯ ಸ್ಥಾನವಿವೇಚನೆ ಇದೆ. ಕೊನೆಯಲ್ಲಿ ಈ ಕ್ಷೇತ್ರದಲ್ಲಿ ಆಗುತ್ತಿರುವ ಸ್ಥಿತ್ಯಂತರಗಳ ಚರ್ಚೆಯೂ

೬. ಬಿ.ಸಿ. ನಾಗೇಂದ್ರ ಕುಮಾರ್, ಶಿವರಾಮ ಕಾರಂತರ ಸಂಸ್ಕೃತಿ ಪರಿಕಲ್ಪನೆಯ ನೆಲೆಗಳು, ೨೦೦೬

ಕಾರಂತರನ್ನು ಕಾದಂಬರಿಕಾರರಾಗಿಯೇ ಮುಖ್ಯವಾಗಿ ಅಧ್ಯಯನ ಮಾಡಿಕೊಂಡು ಬರಲಾಗಿದೆ. ಆದರೆ ಅವರು ಬೇರೆಬೇರೆ ಜ್ಞಾನಕ್ಷೇತ್ರಗಳಿಗೆ ಸಂಬಂಧಿಸಿ ಅಪಾರ ಬರೆವಣಿಗೆ ಮಾಡಿದ್ದಾರೆ. ಅದರಲ್ಲಿ ಸಂಸ್ಕೃತಿ ಅಧ್ಯಯನದ ಬರೆಹಗಳೂ ಸೇರಿವೆ. ಪ್ರಸ್ತುತ ಪ್ರಬಂಧದಲ್ಲಿ ಕಾರಂತರು ಸಂಸ್ಕೃತಿ ಕುರಿತ ಗ್ರಹಿಕೆಗಳು ಯಾವುವು ಎಂಬುದನ್ನು ಅವರ ಲೇಖನಗಳ ಮೂಲಕ ವಿವೇಚನೆಯನ್ನು ಮಾಡಲಾಗಿದೆ. ಜತೆಗೆ ಈ ಸಂಸ್ಕೃತಿ ಪರಿಕಲ್ಪನೆಯು ಹೇಗೆ ಅವರ ಕಾದಂಬರಿಗಳಲ್ಲಿ, ಅದರಲ್ಲೂ ಕಲಾವಿದರನ್ನು ನಾಯಕರಾಗಿ ಚಿತ್ರಿಸುವ ಕಾದಂಬರಿಗಲ್ಲಿ ಅನುಸಂಧಾನಗೊಳ್ಳುತ್ತದೆ ಎಂಬುದನ್ನು ಗಮನಿಸಲಾಗಿದೆ.



PDF created with pdfFactory trial version www.pdffactory.com

೭. ಎಸ್.ಓ. ಸುಕನ್ಯಾ, ಆಧುನಿಕ ಕನ್ನಡ ಕಾವ್ಯದಲ್ಲಿ ದಾಂಪತ್ಯದ ಪರಿಕಲ್ಪನೆ, ೨೦೦೮
ಆಧುನಿಕ ಕನ್ನಡ ಕಾವ್ಯವನ್ನು ಅನೇಕ ಆಶಯಗಳ ಮೂಲಕ ಪ್ರವೇಶಿಸಬಹುದು. ಇಲ್ಲಿ ದಾಂಪತ್ಯದ ಆಶಯವನ್ನು ಇಟ್ಟುಕೊಂಡು ಪ್ರವೇಶಿಸಲಾಗಿದೆ. ದಾಂಪತ್ಯದಲ್ಲಿ ಬೇರೆಬೇರೆ ಬಗೆಯ ವಿನ್ಯಾಸಗಳನ್ನು ಕನ್ನಡ ಕಾವ್ಯ ಒಳಗೊಂಡಿರುವುದನ್ನು ಇಲ್ಲಿ ಗಮನಿಸಲಾಗಿದೆ. ವಿಷಮ ದಾಂಪತ್ಯ, ಸಮರಸ ದಾಂಪತ್ಯ, ದಾಂಪತ್ಯದಲ್ಲಿ ವಾತ್ಸಲ್ಯದ ಆಯಾಮ, ಸಖಸಖಿಯರ ಕಲ್ಪನೆ, ಇತ್ಯಾದಿ ಅಧ್ಯಾಯಗಳಿವೆ. ದಾಂಪತ್ಯದ ದಾರ್ಶನೀಕರಣ, ಆದರ್ಶೀಕರಣ, ಪೌರಾಣೀಕರಣ, ಶೃಂಗಾರೀಕಣಗಳ ಆಯಾಮಗಳ ಚರ್ಚೆಯಿದೆ. ಪ್ರಾತಿನಿಧಿಕ ದಾಂಪತ್ಯಗೀತೆಗಳನ್ನು ಇಟ್ಟುಕೊಂಡು, ಅವುಗಳ ಭಾಷಿಕ ವಿನ್ಯಾಸವನ್ನು ಚರ್ಚಿಸುವ ಅಧ್ಯಾಯವೂ ಇದೆ.

**೮. ಎನ್. ವೆಂಕಟೇಶಯ್ಯ, ಕನ್ನಡ ಸಾಹಿತ್ಯದಲ್ಲಿ ರಾಷ್ಟ್ರೀಯತೆಯ ಕಲ್ಪನೆ, ೨೦೦೮**
ಆಧುನಿಕ ಸಾಹಿತ್ಯದಲ್ಲಿ ರಾಷ್ಟ್ರೀಯತೆ ಪರಿಕಲ್ಪನೆಯನ್ನು ಬೇರೆಬೇರೆ ಲೇಖಕರು ಬೇರೆಬೇರೆ ಚಾರಿತ್ರಿಕ ಸಂದರ್ಭದಲ್ಲಿ ಬೇರೆಬೇರೆ ತಾತ್ವಿಕ ರೂಪದಲ್ಲಿ ಮಂಡಿಸಿರುವರು. ಬಿಎಂಶ್ರೀಕಂಠಯ್ಯನವರಿಂದ ಶುರುವಾಗಿ ೨೦ನೇ ಶತಮಾನದ ದಲಿತ ಚಿಂತಕರವರೆಗೆ ರಾಷ್ಟ್ರಿಯತೆಯ ವಿಭಿನ್ನ ವಿನ್ಯಾಸಗಳ ಅಭಿವ್ಯಕ್ತಿಯಿದೆ. ಈ ವಿನ್ಯಾಸಗಳ ವಿಶಿಷ್ಟತೆ ಹಾಗೂ ಸಮಸ್ಯೆಗಳನ್ನು ಕುರಿತು ಶೋಧನೆ ಮಾಡುವ ಕೆಲಸವನ್ನು ಇಲ್ಲಿ ಮಾಡಲಾಗಿದೆ. ಆಧುನಿಕ ಕನ್ನಡ ಚಿಂತನೆಯನ್ನು ಬೇರೆಬೇರೆ ಪರಿಕಲ್ಪನೆಗಳು ಮೂಲಕ ಪ್ರವೇಶಿಸುವ ಸಾಧ್ಯತೆಯನ್ನು ಈ ಪ್ರಬಂಧ ತೋರಿಸುತ್ತದೆ.

**೧೮. ಎಂ.ಫಿಲ್ ಮಾರ್ಗದರ್ಶನ**

**ಅಭ್ಯರ್ಥಿಗಳು ಶೀರ್ಷಿಕೆ ಪದವಿಘೋಷಿಸಿದ ದಿನಾಂಕ**

**೧. ಅಮರೇಶ ನುಗಡೋಣಿ, ಕನ್ನಡ ಸಾಹಿತ್ಯದಲ್ಲಿ ಏಕಲವ್ಯ, ೧೯೯೩-೯೪**
ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣದ ವ್ಯಕ್ತಿಗಳನ್ನು ಬೇರೆಬೇರೆ ಮೌಲ್ಯಗಳ ರೂಪಕಗಳನ್ನಾಗಿ ಗ್ರಹಿಸಿ ಚಿತ್ರಿಸುವ ಒಂದು ಪರಿಪಾಠವಿದೆ. ಕರ್ನಾಟಕದಲ್ಲಿ ಕೆಳಜಾತಿ ಮತ್ತು ಹಿಂದುಳಿದ ವರ್ಗಗಳಲ್ಲಿ ಉಂಟಾಗಿರುವ ಸಾಮಾಜಿಕ ಎಚ್ಚರಕ್ಕೂ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಈ ಬಗೆಯ ರೂಪಕಗಳು ಕಾಣಿಸಿಕೊಳ್ಳುತ್ತಿರುವುದಕ್ಕೂ ಸಂಬಂಧವಿದೆ. ಈ ಹಿನ್ನೆಲೆಯಲ್ಲಿ ಏಕಲವ್ಯನನ್ನು ಇಟ್ಟುಕೊಂಡು ಮಾಡಿರುವ ಸಾಂಸ್ಕೃತಿಕ ವಿಶ್ಲೇಷಣೆಯಿದು.

**೨. ಮಾಧವ ಪೆರಾಜೆ, ತೃತೀಯಲಿಂಗ:ಹೊಸಪೇಟೆ ತಾಲೂಕಿನ ಗಂಡುಜೋಗಮ್ಮಂದಿರ ಅಧ್ಯಯನ, ೧೯೯೩-೧೯೯೪**
ಕರ್ನಾಟಕದ ಎಲ್ಲಮ್ಮ ಮತ್ತು ಹುಲಿಗೆಮ್ಮ ಸಂಪ್ರದಾಯಕಗಳು ಹೆಚ್ಚು ಕ್ರಿಯಾಶೀಲವಾಗಿರುವ ಪ್ರದೇಶಗಳಲ್ಲಿ ಹೊಸಪೇಟೆಯೂ ಒಂದು. ಇಲ್ಲಿ ದೊಡ್ಡಪ್ರಮಾಣದಲ್ಲಿ ಎಲ್ಲಮ್ಮ-ಹುಲಿಗೆಮ್ಮ ಸಂಪ್ರದಾಯದ ಜೋಗಪ್ಪ ಮತ್ತು ಜೋಗಮ್ಮಂದಿರು ಇದ್ದಾರೆ. ಇವರಲ್ಲಿ ಗಂಡುಜೋಗಮ್ಮಂದಿರನ್ನು ಇಟ್ಟುಕೊಂಡು, ಅವರ ಸಮಾಜೋ ಧಾರ್ಮಿಕ ಬದುಕಿನ ಬೇರೆಬೇರೆ ಮಗ್ಗುಲುಗಳನ್ನು ಇಲ್ಲಿ ಶೋಧಿಸಲಾಗಿದೆ.

**೩. ಕೆ. ಶಿವಕುಮಾರ, ಆಧುನಿಕ ಕನ್ನಡ ಕಾವ್ಯದ ಮೊದಲ ಘಟ್ಟದ ವಿವಿಧ ನೆಲೆಗಳು, ೧೯೯೪-೧೯೯೫**
ಆಧುನಿಕ ಕನ್ನಡ ಕಾವ್ಯದ ಚರ್ಚೆಯನ್ನು ಮಾಡುವ ಬಿಎಂಶ್ರೀಯವರ 'ಇಂಗ್ಲಿಷ್ ಗೀತಗಳು' ಪ್ರಸ್ತಾಪಕ್ಕೆ ಬರುವುದು ಸಾಮಾನ್ಯ. ಆದರೆ ಅದಕ್ಕೂ ಮೊದಲು ಹಾಗೂ ಅದರ ಜತೆಯಲ್ಲಿ ಇನ್ನೂ ಅನೇಕ ಪ್ರೇರಣೆಗಳು ಆಧುನಿಕ ಕನ್ನಡ ಕಾವ್ಯದ ಉಗಮದ ಹೊತ್ತಲ್ಲಿ ಕೆಲಸ ಮಾಡಿದವು. ಅವು ಅನುವಾದಗಳು, ಜನಪದ ರಚನೆಗಳು, ತತ್ವಪದಗಳು ಇತ್ಯಾದಿ. ಇಂತಹ ಬಹುಮುಖಿ ಪ್ರೇರಣೆಗಳನ್ನು ಪ್ರಬಂಧವು ಶೋಧಿಸುವ ಯತ್ನ ಮಾಡುತ್ತದೆ.

**೪. ಬಿ. ಆರ್. ಕುಶಾಲ, ಕನ್ನಡ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆ ಮತ್ತು ಜೀವನದರ್ಶನ, ೧೯೯೫-೧೯೯೬**
ಪರಿಸರ ರಕ್ಷಣೆಯ ಕಾಳಜಿಯು ಈಚೆಗೆ ದೊಡ್ಡ ಪ್ರಮಾಣದಲ್ಲಿ ಕಾಣಿಸಿಕೊಂಡಿದೆ. ಆದರೆ ಕನ್ನಡ ಬರೆಹದಲ್ಲಿ ಪರಿಸರದ ಪ್ರಜ್ಞೆಯು ಬೇರೊಂದು ವಿಧಾನದಲ್ಲಿದೆ. ತೇಜಸ್ವಿ ಕುವೆಂಪು ಮುಂತಾದವರಲ್ಲಿ ಅದು ಬಾಳಿನ ಸಹಜ ಪರಿಸರವಾಗಿ, ಲೋಕವನ್ನು ನೋಡುವ ದೃಷ್ಟಿಕೋನವಾಗಿ ಇದೆ. ಇದರ ಚರ್ಚೆಯನ್ನು ಪ್ರಬಂಧವು ಮಾಡುತ್ತದೆ.

**೫. ನಾಗರಾಜ, ಕುಸುಮಾಕರ ದೇವರಗೆಣ್ಣೂರ ಅವರ ಕಾದಂಬರಿಗಳು, ೨೦೦೪-೨೦೦೫**
ಕನ್ನಡದಲ್ಲಿ ಹೆಚ್ಚು ಚರ್ಚೆಗೆ ಒಳಗಾಗದ ಕಾದಂಬರಿಕಾರರಲ್ಲಿ ಒಬ್ಬರಾದ ಕುಸುಮಾಕರ ದೇವರಗೆಣ್ಣೂರ ಅವರು ಪ್ರತಿಭಾವಂತ ಲೇಖಕರು. ಅವರ ಕಾದಂಬರಿಗಳಾದ 'ನಾಲ್ಕನೆಯ ಆಯಾಮ' 'ನಿರಿಂದ್ರಿಯ' 'ಪರಿಘ' ಹಾಗೂ 'ಬಯಲು-ಬಸಿರು'ಗಳನ್ನು ಇಟ್ಟುಕೊಂಡು, ಈ ಕಾದಂಬರಿಗಳಲ್ಲಿರುವ ಜೀವನತತ್ವಗಳನ್ನು ಪ್ರಬಂಧವು ವಿಶ್ಲೇಷಿಸುತ್ತದೆ.

**೬. ತುಕಾರಾಂ, ಅಮೆರಿಕ ಕುರಿತ ಮೂರು ಪ್ರವಾಸ ಕಥನಗಳು, ೨೦೦೬-೨೦೦೭**



PDF created with pdfFactory trial version www.pdffactory.com

ಕನ್ನಡದಲ್ಲಿ ಅತಿಹೆಚ್ಚು ಪ್ರವಾಸ ಕಥನಗಳು ಅಮೆರಿಕವನ್ನು ಕುರಿತಾಗಿವೆ. ಇದಕ್ಕೆ ಕಾರಣ, ಅಮೆರಿಕವು ಭಾರತಕ್ಕೆ ಆರ್ಥಿಕ ರಾಜಕಾರಣದಲ್ಲಿ ಮುಖ್ಯ ದೇಶವಾಗಿದ್ದು, ಅಲ್ಲಿಗೆ ಹೆಚ್ಚು ಜನರು ಹೋಗುತ್ತಿರುವುದು. ಆದರೆ ಅಮೆರಿಕವನ್ನು ಈ ಕಥನಗಳು ಕಾಣಿಸುವ ಬಗೆಯಲ್ಲಿ ಇರುವ ವೈಭವೀಕರಣ, ತಿರಸ್ಕರಣ ಹಾಗೂ ಸ್ವಸಂಸ್ಕೃತಿಯ ಜತೆಗೆ ಮಾಡುವ ತುಲನೆ ಮುಂತಾದ ವಿಧಾನಗಳ ವಿಶ್ಲೇಷಣೆಯನ್ನು ಪ್ರಬಂಧ ಮಾಡುತ್ತದೆ.

**೭. ಸೀತಾರಾಮಯ್ಯ, ಸಣ್ಣಗುಡ್ಡಯ್ಯನವರ ಸಾಹಿತ್ಯದ ವಿಶ್ಲೇಷಣೆ, ೨೦೦೭-೨೦೦೮**
ತುಮಕೂರು ಸೀಮೆಯ ಶ್ರೇಷ್ಠ ಅಧ್ಯಾಪಕರಲ್ಲಿ ಒಬ್ಬರೂ, ಒಳ್ಳೆಯ ಲಲಿತಪ್ರಬಂಧಗಳನ್ನು ಬರೆದ ಲೇಖಕರೂ ಆದ ಎಚ್. ಜಿ. ಸಣ್ಣಗುಡ್ಡಯ್ಯನವರ ಸಮಗ್ರ ಬರೆಹಗಳನ್ನು ಇಟ್ಟಕೊಂಡು, ಅವರ ಚಿಂತನೆ ಹಾಗೂ ಜೀವನದೃಷ್ಟಿಕೋನವನ್ನು ಈ ಪ್ರಬಂಧ ಚರ್ಚಿಸುತ್ತದೆ.

**೮. ರವಿಗೋಮ್ಯಾ, ಯಾದಗಿರಿ ಸೀಮೆಯ ಮೊಹರಂ ಹಾಡುಗಳು, ೨೦೦೭-೨೦೦೮**
ಯಾದಗಿರಿ ಸೀಮೆಯು ಕರ್ನಾಟಕದ ಬಹುಭಾಷಿಕ ಪ್ರದೇಶಗಳಲ್ಲಿ ಒಂದು. ಇಲ್ಲಿ ಉರ್ದು ಕನ್ನಡ ತೆಲುಗು ಹಾಗೂ ಲಂಬಾಣಿ ಭಾಷೆಗಳಿವೆ. ಈ ಭಾಷೆಗಳಲ್ಲಿ ಇಲ್ಲಿನ ಬೇರೆಬೇರೆ ಸಮುದಾಯಗಳು ತಂತಮ್ಮ ಸಂಸ್ಕೃತಿಯ ಹಿನ್ನೆಲೆಯಿಂದ ಹಾಡಿರುವ ಮೊಹರಂ ಹಾಡುಗಳನ್ನು ಚರ್ಚಿಸಲಾಗಿದೆ.

**೯. ಹರಿಜನ ಮಲ್ಲಯ್ಯ, ಬಳ್ಳಾರಿ ಜಿಲ್ಲೆಯ ರಂಗಗೀತೆಗಳ ಅಧ್ಯಯನ, ೨೦೦೮-೦೯**
ಬಳ್ಳಾರಿಯು ರಂಗಭೂಮಿ ಚಟುವಟಿಕೆಗಳಿಗೆ ಖ್ಯಾತವಾದ ಸೀಮೆ. ಈ ಭಾಗದಲ್ಲಿರುವ ರಂಗಗೀತೆಗಳನ್ನು ಕುರಿತು ಸ್ವತಃ ರಂಗಭೂಮಿ ಹಿನ್ನೆಲೆಯಿಂದ ಬಂದ ಮಲ್ಲಯ್ಯನವರು, ಮಾಡಿರುವ ವಿಶ್ಲೇಷಣೆಯಿಲ್ಲಿದೆ.

**೧೦. ಪ್ರಸನ್ನಕುಮಾರ್, ಶ್ರೀನಿವಾಸ ವೈದ್ಯರ 'ಹಳ್ಳಬಂತು ಹಳ್ಳ' ಕಾದಂಬರಿಯ ಅಧ್ಯಯನ, ೨೦೦೮-೦೯**
ಮೂರು ತಲೆಮಾರಿನ ಕಥೆಯನ್ನುಳ್ಳ ಕನ್ನಡದ ಮಹತ್ವದ ಕಾದಂಬರಿಗಳಲ್ಲಿ ಒಂದಾಗ 'ಹಳ್ಳ ಬಂತು ಹಳ್ಳ' ಕುರಿತ ವಿಶ್ಲೇಷಣೆಯಿದು.

**೧೯. ಪಡೆದ ಪ್ರಶಸ್ತಿ – ಮನ್ನಣೆ**

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ೧೯೯೩, ೧೯೯೮, ೨೦೦೦
ಜಿಎಸ್ಎಸ್ ಪ್ರಶಸ್ತಿ (೨೦೦೮),
ಶಿವಮೊಗ್ಗ ಕರ್ನಾಟಕ ಸಂಘದ ಲಂಕೇಶ್ ಪ್ರಶಸ್ತಿ (೨೦೦೮)
ಕನ್ನಡ ಸಾಹಿತ್ಯ ಪರಿಷತ್ತಿನ ಹಾಮಾನಾ ಪ್ರಶಸ್ತಿ (೨೦೦೮)

**೨೦. ಶೈಕ್ಷಣಿಕ ಉದ್ದೇಶಕ್ಕಾಗಿ (ವಿಶ್ವವಿದ್ಯಾಲಯ ಹೊರತುಪಡಿಸಿ) ನಿರ್ವಹಿಸಿದ ಯೋಜನೆಗಳು**

**ಅ. ಸಾಂಸ್ಕೃತಿಕ ಅಧ್ಯಯನ (೨೦೦೪)**

ಕರ್ನಾಟಕ ಸಾಹಿತ್ಯ ಅಕಾದೆಮಿಗಾಗಿ ಸಿದ್ಧಪಡಿಸಿಕೊಟ್ಟ ಯೋಜನೆಯಿದು. ಖ್ಯಾತ ವಿಮರ್ಶಕರಾದ ಗಿರಡ್ಡಿ ಗೋವಿಂದರಾಜ ಅವರ ಸಂಪಾದಕತ್ವದಲ್ಲಿ ಬಂದ ಸಾಹಿತ್ಯಕ ಪರಿಭಾಷೆ ಯೋಜನೆಯಲ್ಲಿದು ಪ್ರಕಟವಾಯಿತು. ಕನ್ನಡದಲ್ಲಿ ಈಚೆಗೆ ಸಾಂಸ್ಕೃತಿಕ ಅಧ್ಯಯನಗಳು ಜನಪ್ರಿಯವಾಗಿವೆ. ಆದರೆ ಅವುಗಳ ಸ್ವರೂಪಕ್ಕೆ ಒಂದು ಖಚಿತತೆ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಕನ್ನಡದ ಸಾಂಸ್ಕೃತಿಕ ಅಧ್ಯಯನಗಳ ಚರಿತ್ರೆಯನ್ನೂ ಅವುಗಳ ವಿಶಿಷ್ಟತೆ ಹಾಗೂ ಸಮಸ್ಯೆಗಳನ್ನು ಈಕೃತಿ ಚರ್ಚಿಸುತ್ತದೆ.

**ಆ. ಅಮೀರಬಾಯಿ ಕರ್ನಾಟಕಿ**

ಕೇಂದ್ರ ಸಾಹಿತ್ಯ ಅಕಾಡೆಮಿ ಕೊಡಮಾಡಿದ ರೈಟರ್ ಇನ್ ಕ್ಯಾಂಪಸ್ ಎಂಬ ಯೋಜನೆಯ ಅಡಿಯಲ್ಲಿ (೨೦೦೮-೦೯) ನಿರ್ವಹಿಸಲಾದ ಯೋಜನೆಯಿದು. ಬಾಗಲಕೋಟೆ ಜಿಲ್ಲೆಯ ಬೀಳಗಿಯಿಂದ ಹೋಗಿ ಮುಂಬೈ ಚಲನಚಿತ್ರ ರಂಗದಲ್ಲಿ ತನ್ನ ಗಾಯನದ ಮೂಲಕ ಹೆಸರು ಮಾಡಿದ ಅಮೀರಬಾಯಿ ಕರ್ನಾಟಕಿ ಅವರ ಜೀವನಚಿತ್ರವಿದು. ಮೂಲತಃ ಕನ್ನಡ ರಂಗಭೂಮಿಯಿಂದ ಹೋದ ಅಮೀರಬಾಯಿ ಕನ್ನಡ ಸಿನಿಮಾಗಳಲ್ಲಿ ನಟಿಸಿದರು. ಹಾಡಿದರು. ಅವರನ್ನು ರೂಪಿಸಿದ ಸಾಂಸ್ಕೃತಿಕ ಸಂಗತಿಗಳನ್ನು ಮುಖ್ಯವಾಗಿ ಚರ್ಚಿಸುವ ಕೃತಿಯಿದು.

**೨೧. ನಿರ್ವಹಿಸಿದ ಇತರೆ ಕೆಲಸಗಳು**



PDF created with pdfFactory trial version www.pdffactory.com

೧. **ಆಡಳಿತಾತ್ಮಕ ಕೆಲಸಗಳು**

೨. **ಹೆಚ್ಚಿನ ಜವಾಬ್ದಾರಿಗಳು**

೧. ಡೀನ್ ಭಾಷಾನಿಕಾಯ ೨೦೦೯–೧೧
೨. ಲೋಹಿಯಾ ಪೀಠದ ಸಂಚಾಲಕ



PDF created with pdfFactory trial version www.pdffactory.com